सत्यमेव जयते
ಭಾರತ ಸರ್ಕಾರ

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

# ಹಿಂದೂ ವಿವಾಹ ಅಧಿನಿಯಮ, 1955

(1955ರ ಅಧಿನಿಯಮ ಸಂಖ್ಯೆ 25)
[19ನೇ ಜುಲೈ 2001 ರಂದು ಇದ್ದಂತೆ]

# THE HINDU MARRIAGE ACT, 1955

(Act No. 25 of 1955)
[As on the 19th July 2001]

ಭಾರತ ಸರ್ಕಾರದ ಪರವಾಗಿ ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು
ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ.
2001

# ಹಿಂದೂ ವಿವಾಹ ಅಧಿನಿಯಮ, 1955

(1955ರ ಅಧಿನಿಯಮ ಸಂಖ್ಯೆ 25)

## ಪ್ರಕರಣಗಳ ಅನುಕ್ರಮಣಿಕೆ


| ಪ್ರಕರಣಗಳು: | ಪ್ರಾರಂಭಿಕ | ಪುಟಗಳು |
|---|---|---|
| 1. | ಚಿಕ್ಕ ಹೆಸರು ಮತ್ತು ವ್ಯಾಪ್ತಿ | 1 |
| 2. | ಅಧಿನಿಯಮದ ಅನ್ವಯ | 1 |
| 3. | ಪರಿಭಾಷೆಗಳು | 1 |
| 4. | ಅಧಿನಿಯಮದ ಅಧ್ಯಾರೋಹಿ ಪ್ರಭಾವ | 2 |
| | ಹಿಂದೂ ವಿವಾಹಗಳು | |
| 5. | ಹಿಂದೂ ವಿವಾಹಕ್ಕಾಗಿ ಷರತ್ತುಗಳು | 2 |
| 6. | [ನಿರಸಿತ] | 3 |
| 7. | ಹಿಂದೂ ವಿವಾಹ ಕರ್ಮಾಚರಣೆಗಳು | 3 |
| 8. | ಹಿಂದೂ ವಿವಾಹಗಳ ನೋಂದಣಿ | 3 |
| | ದಾಂಪತ್ಯಾಧಿಕಾರಗಳ ಪೂರ್ವಸ್ಥಿತಿ ಪ್ರಾಪ್ತಿ ಮತ್ತು ನ್ಯಾಯಿಕ ಪ್ರತ್ಯೇಕೀಕರಣ | |
| 9. | ದಾಂಪತ್ಯಾಧಿಕಾರಗಳ ಪೂರ್ವಸ್ಥಿತಿ ಪ್ರಾಪ್ತಿ | 3 |
| 10. | ನ್ಯಾಯಿಕ ಪ್ರತ್ಯೇಕೀಕರಣ | 4 |
| | ವಿವಾಹದ ಅಕೃತತೆ ಮತ್ತು ವಿವಾಹ ವಿಚ್ಛೇದನ | |
| 11. | ಶೂನ್ಯ ವಿವಾಹಗಳು | 4 |
| 12. | ಶೂನ್ಯಕರಣೀಯ ವಿವಾಹಗಳು | 4 |
| 13. | ವಿವಾಹ ವಿಚ್ಛೇದನ | 4 |
| 13ಎ. | ವಿವಾಹ ವಿಚ್ಛೇದನದ ವ್ಯವಹರಣೆಗಳಲ್ಲಿ ಬದಲಿ ಪರಿಹಾರ | 6 |
| 13ಬಿ. | ಪರಸ್ಪರ ಸಮ್ಮತಿಯ ಮೂಲಕ ವಿವಾಹ ವಿಚ್ಛೇದನ | 6 |
| 14. | ವಿವಾಹದ ಅನಂತರ ಒಂದು ವರ್ಷದೊಳಗಾಗಿ ಯಾವ ಅರ್ಜಿಯನ್ನೂ ಸಲ್ಲಿಸಲಾಗದು | 6 |
| 15. | ವಿವಾಹ ವಿಚ್ಛೇದನ ಹೊಂದಿದ ವ್ಯಕ್ತಿಗಳು ಮತ್ತೆ ಯಾವಾಗ ವಿವಾಹವಾಗಬಹುದು | 7 |
| 16. | ಶೂನ್ಯ ಮತ್ತು ಶೂನ್ಯಕರಣೀಯ ವಿವಾಹಜನಿತ ಮಕ್ಕಳ ಕಾನೂನು ಸಮ್ಮತತೆ | 7 |
| 17. | ದ್ವಿವಿವಾಹಕ್ಕೆ ದಂಡನೆ | 7 |
| 18. | ಹಿಂದೂ ವಿವಾಹದ ಕೆಲವು ಇತರ ಷರತ್ತುಗಳ ಉಲ್ಲಂಘನೆಗೆ ದಂಡನೆ | 7 |
| | ಅಧಿಕಾರ ವ್ಯಾಪ್ತಿ ಮತ್ತು ಪ್ರಕ್ರಿಯೆ | |
| 19. | ಅರ್ಜಿಯನ್ನು ಯಾವ ನ್ಯಾಯಾಲಯಕ್ಕೆ ಸಲ್ಲಿಸುವುದು | 7 |
| 20. | ಅರ್ಜಿಗಳ ಒಳಾಂಶಗಳು ಮತ್ತು ಸತ್ಯಾಪನೆ | 7 |
| 21. | 1908ರ 5ನೇ ಅಧಿನಿಯಮದ ಅನ್ವಯ | 8 |
| 21ಎ. | ಕೆಲವು ಸಂದರ್ಭಗಳಲ್ಲಿ ಅರ್ಜಿಗಳನ್ನು ವರ್ಗಾಯಿಸಲು ಅಧಿಕಾರ | 8 |
| 21ಬಿ. | ಈ ಅಧಿನಿಯಮದ ಮೇರೆಗಿನ ಅರ್ಜಿಗಳ ವಿಚಾರಣೆ ಮತ್ತು ವಿಲೇಗೆ ಸಂಬಂಧಪಟ್ಟ ವಿಶೇಷ ಉಪಬಂಧ | 8 |
| 21ಸಿ. | ದಸ್ತಾವೇಜೀಯ ಸಾಕ್ಷ್ಯ | 8 |

| | | |
|---|---|---|
| 22. | ವ್ಯವಹರಣೆಗಳು ಗೋಪ್ಯವಾಗಿರತಕ್ಕುದು ಮತ್ತು ಅವುಗಳನ್ನು ಮುದ್ರಿಸತಕ್ಕುದಲ್ಲ ಅಥವಾ ಪ್ರಕಟಿಸತಕ್ಕುದಲ್ಲ | 8 |
| 23. | ವ್ಯವಹರಣೆಗಳಲ್ಲಿ ಡಿಕ್ರಿ | 9 |
| 23ಎ. | ವಿವಾಹ ವಿಚ್ಛೇದನ ಮತ್ತು ಇತರ ವ್ಯವಹರಣೆಗಳಲ್ಲಿ ಪ್ರತಿ ಅರ್ಜಿದಾರನಿಗೆ/ಳಿಗೆ ಪರಿಹಾರ | 9 |
| 24. | ವಾದಕಾಲದಲ್ಲಿ ನಿರ್ವಹಣಾ ವೆಚ್ಚ ಮತ್ತು ವ್ಯವಹರಣೆಗಳ ವೆಚ್ಚಗಳು | 10 |
| 25. | ಶಾಶ್ವತ ನಿರ್ವಹಣಾ ವೆಚ್ಚ ಮತ್ತು ಜೀವನಾಂಶ | 10 |
| 26. | ಮಕ್ಕಳ ಅಭಿರಕ್ಷೆ | 10 |
| 27. | ಸ್ವತ್ತಿನ ವಿಲೇವಾರಿ | 10 |
| 28. | ಡಿಕ್ರಿಗಳ ಮತ್ತು ಆದೇಶಗಳ ಮೇಲೆ ಅಪೀಲು | 10 |
| 28ಎ. | ಡಿಕ್ರಿಗಳ ಮತ್ತು ಆದೇಶಗಳ ಜಾರಿ | 11 |
| | ಉಳಿಸುವಿಕೆಗಳು ಮತ್ತು ನಿರಸನಗಳು | |
| 29. | ಉಳಿಸುವಿಕೆಗಳು | 11 |
| 30. | [ನಿರಸಿತ] | 11 |

# ಮುನ್ನುಡಿ

19ನೇ ಜುಲೈ 2001 ರಂದು ಇದ್ದಂತೆ ಹಿಂದೂ ವಿವಾಹ ಅಧಿನಿಯಮ, 1955ರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 17-9-2001ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 20ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 18 ರಿಂದ 28ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳ) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ಡಾ|| ಸುಭಾಷ್ ಸಿ. ಜೈನ್,
ಕಾರ್ಯದರ್ಶಿ,
ವಿಧಾಯೀ ಇಲಾಖೆ,
ಭಾರತ ಸರ್ಕಾರ.

ನವದೆಹಲಿ

# PREFACE

This Edition of The Hindu Marriage Act, 1955 as on the 19th July 2001, contains the authoritative Text of that Act in Kannada which was published in the Gazette of India Extraordinary, Part IX, Section 1, No. 1, Vol. 20, dated:17-9-2001 on pages 18 to 28.

This Kannada Text was published under the authority of the President under clause (a) of Section 2 of The Authoritative Texts (Central Laws) Act, 1973 and on such publication it became the authoritative text of that Act in Kannada.

**Dr. Subhash C. Jain,**
Secretary,
Legislative Department,
Government of India.

New Delhi

# ಹಿಂದೂ ವಿವಾಹ ಅಧಿನಿಯಮ, 1955

(1955ರ ಅಧಿನಿಯಮ ಸಂಖ್ಯೆ 25)

[18ನೇ ಮೇ 1955]

ಹಿಂದೂಗಳಲ್ಲಿ ವಿವಾಹಕ್ಕೆ ಸಂಬಂಧಿಸಿದ ಕಾನೂನನ್ನು ತಿದ್ದುಪಡಿ ಮಾಡುವ ಮತ್ತು ಕ್ರೋಡೀಕರಿಸುವ ಅಧಿನಿಯಮ.

ಭಾರತ ಗಣರಾಜ್ಯದ ಆರನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಗಿನಂತೆ ಅಧಿನಿಯಮಿಸಲಾಗಿದೆ:-

ಪ್ರಾರಂಭಿಕ

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ :- (1) ಈ ಅಧಿನಿಯಮವನ್ನು ಹಿಂದೂ ವಿವಾಹ ಅಧಿನಿಯಮ, 1955 ಎಂದು ಕರೆಯತಕ್ಕುದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನುಳಿದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ ಮತ್ತು ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯಕ್ಷೇತ್ರಗಳ ಅಧಿವಾಸಿಗಳಾಗಿದ್ದು ಆ ರಾಜ್ಯಕ್ಷೇತ್ರಗಳ ಹೊರಗಿರುವ ಹಿಂದೂಗಳಿಗೂ ಇದು ಅನ್ವಯಿಸುತ್ತದೆ.

2 ಅಧಿನಿಯಮದ ಅನ್ವಯ.- (1) ಈ ಅಧಿನಿಯಮವು,-

(ಎ) ವೀರಶೈವ, ಲಿಂಗಾಯಿತ, ಅಥವಾ ಬ್ರಹ್ಮೊ, ಪ್ರಾರ್ಥನಾ ಅಥವಾ ಆರ್ಯ ಸಮಾಜದ ಅನುಯಾಯಿಗಳೂ ಸೇರಿ ಯಾವುದೇ ರೂಪ ಅಥವಾ ವಿಕಾಸವನ್ನೊಳಗೊಂಡ ಹಿಂದೂ ಮತದ ಯಾವನೇ ವ್ಯಕ್ತಿಗೆ,

(ಬಿ) ಬೌದ್ಧ, ಜೈನ ಅಥವಾ ಸಿಖ್ ಮತದ ಯಾವನೇ ವ್ಯಕ್ತಿಗೆ, ಮತ್ತು

(ಸಿ) ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ, ಇಲ್ಲಿ ಹೇಳಿದ ಯಾವುವೇ ವಿಷಯಗಳ ಬಗ್ಗೆ ಅವನು ಹಿಂದೂ ಕಾನೂನಿಗೆ ಅಥವಾ ಅಂಥ ಕಾನೂನಿನ ಭಾಗವಾಗಿರುವ ಯಾವುದೇ ರೂಢಿಗೆ ಅಥವಾ ಆಚರಣೆಗೆ ತಾನು ಒಳಪಡುತ್ತಿದ್ದಿಲ್ಲವೆಂದು ರುಜುವಾತುಪಡಿಸಿದ ಹೊರತು, ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯ ಕ್ಷೇತ್ರಗಳಲ್ಲಿ ಅಧಿವಾಸಿಸುವ ಮತ್ತು ಮುಸ್ಲಿಮ್, ಕ್ರೈಸ್ತ, ಪಾರ್ಸಿ ಅಥವಾ ಯಹೂದಿ ಮತದವನಲ್ಲದ ಯಾವನೇ ಇತರ ವ್ಯಕ್ತಿಗೆ,

- ಅನ್ವಯಿಸುತ್ತದೆ,

ವಿವರಣೆ:- ಈ ಕೆಳಕಂಡ ವ್ಯಕ್ತಿಗಳು, ಸಂದರ್ಭಾನುಸಾರ, ಹಿಂದೂ, ಬೌದ್ಧ, ಜೈನ ಅಥವಾ ಸಿಖ್ ಮತದವರಾಗಿರುತ್ತಾರೆ:

(ಎ) ತಂದೆ ತಾಯಿ ಇಬ್ಬರೂ ಹಿಂದೂ, ಬೌದ್ಧ, ಜೈನ, ಅಥವಾ ಸಿಖ್ ಮತದವರಾಗಿ ಅವರ ಯಾವುದೇ ಔರಸ ಅಥವಾ ಅನೌರಸ ಮಗು;

(ಬಿ) ತಂದೆ ತಾಯಿಗಳಲ್ಲೊಬ್ಬರು ಹಿಂದೂ, ಬೌದ್ಧ, ಜೈನ ಅಥವಾ ಸಿಖ್ ಮತದವರಾಗಿರುವ ಮತ್ತು ಅಂಥ ತಂದೆ ಅಥವಾ ತಾಯಿಯು ಸೇರಿರುವ ಅಥವಾ ಸೇರಿದ ಬುಡಕಟ್ಟಿನ, ಸಮುದಾಯದ, ಗುಂಪಿನ ಅಥವಾ ಕುಟುಂಬದ ವ್ಯಕ್ತಿಯಂತೆ ಬೆಳೆದು ಬಂದ ಯಾವುದೇ ಔರಸ ಅಥವಾ ಅನೌರಸ ಮಗು; ಮತ್ತು

(ಸಿ) ಹಿಂದೂ, ಜೈನ ಅಥವಾ ಸಿಖ್ ಆಗಿ ಮತಾಂತರಿತನಾದ ಅಥವಾ ಪುನಃ ಮತಾಂತರಿತನಾದ ಯಾವನೇ ವ್ಯಕ್ತಿ.

(2) (1)ನೆಯ ಉಪಪ್ರಕರಣದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅನ್ಯಥಾ ನಿರ್ದೇಶಿಸಿದ ಹೊರತು, ಸಂವಿಧಾನದ 366ನೆಯ ಅನುಚ್ಛೇದದ (25)ನೆಯ ಖಂಡದ ಅರ್ಥ ವ್ಯಾಪ್ತಿಯೊಳಗೆ ಬರುವ ಯಾವುದೇ ಅನುಸೂಚಿತ ಬುಡಕಟ್ಟಿನವರಿಗೆ ಈ ಅಧಿನಿಯಮದಲ್ಲಿರುವುದು ಯಾವುದೂ ಅನ್ವಯಿಸತಕ್ಕುದಲ್ಲ.

(3) ಈ ಅಧಿನಿಯಮದ ಯಾವುದೇ ಭಾಗದಲ್ಲಿ ಬರುವ "ಹಿಂದೂ" ಎಂಬ ಪದವನ್ನು, ಅವನು ಹಿಂದೂ ಮತದವನಾಗಿರದಿದ್ದರೂ, ಈ ಪ್ರಕರಣದಲ್ಲಿರುವ ಉಪಬಂಧಗಳ ಆಧಾರದ ಮೇಲೆ ಈ ಅಧಿನಿಯಮವು ಅನ್ವಯಿಸುವ ವ್ಯಕ್ತಿಯನ್ನೂ ಅದು ಒಳಗೊಳ್ಳುತ್ತದೆ ಎಂಬಂತೆ ಅರ್ಥ ಮಾಡತಕ್ಕುದು.

3. ಪರಿಭಾಷೆಗಳು.- ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,-

(ಎ) "ರೂಢಿ" ಮತ್ತು "ಆಚರಣೆ" ಎಂಬ ಪದಗಳು ನಿರಂತರವಾಗಿ ಮತ್ತು ಏಕಪ್ರಕಾರ ದೀರ್ಘಕಾಲ ಅನುಸರಿಸಲ್ಪಟ್ಟ ಕಾರಣದಿಂದ ಯಾವುದೇ ಸ್ಥಳೀಯ ಪ್ರದೇಶ, ಬುಡಕಟ್ಟು, ಸಮುದಾಯ, ಗುಂಪು ಅಥವಾ ಕುಟುಂಬದಲ್ಲಿ ಹಿಂದೂಗಳೊಳಗೆ ಕಾನೂನುಬಲ ಪಡೆದಿರುವ ಯಾವುದೇ ನಿಯಮವನ್ನು ಸೂಚಿಸುತ್ತವೆ:

ಪರಂತು, ಆ ನಿಯಮವು ನಿಶ್ಚಿತವಾದುದೂ ಮತ್ತು ಅಯುಕ್ತವಲ್ಲದ್ದೂ ಅಥವಾ ಸಾರ್ವಜನಿಕ ನೀತಿಗೆ ವಿರೋಧವಲ್ಲದ್ದೂ ಆಗಿರಬೇಕು:

ಮತ್ತೂ ಪರಂತು, ಒಂದು ಕುಟುಂಬಕ್ಕೆ ಮಾತ್ರ ಅನ್ವಯಿಸಬಹುದಾದ ಒಂದು ನಿಯಮದ ಸಂದರ್ಭದಲ್ಲಿ, ಆ ಕುಟುಂಬವು ಅದನ್ನು ತ್ಯಜಿಸಿರಬಾರದು;

(ಬಿ) "ಜಿಲ್ಲಾ ನ್ಯಾಯಾಲಯ" ಎಂದರೆ, ನಗರ ಸಿವಿಲ್ ನ್ಯಾಯಾಲಯವು ಇರುವ ಯಾವುದೇ ಪ್ರದೇಶದಲ್ಲಿ, (ಆ ನ್ಯಾಯಾಲಯ ಮತ್ತು ಇತರ ಯಾವುದೇ ಪ್ರದೇಶದಲ್ಲಿ) ಅಸಲು ಅಧಿಕಾರ ವ್ಯಾಪ್ತಿಯುಳ್ಳ ಮುಖ್ಯ ಸಿವಿಲ್ ನ್ಯಾಯಾಲಯ ಮತ್ತು ಈ ಅಧಿನಿಯಮದಲ್ಲಿರುವ ವಿಷಯಗಳ ಬಗ್ಗೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದೆಂದು ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ಸಿವಿಲ್ ನ್ಯಾಯಾಲಯವನ್ನೂ ಇದು ಒಳಗೊಳ್ಳುತ್ತದೆ;

(ಸಿ) "ಪೂರ್ಣ ರಕ್ತ" ಮತ್ತು "ಭಿನ್ನರಕ್ತ".- ಒಬ್ಬ ಪೂರ್ವಜನಿಂದ ಒಬ್ಬಳೇ ಹೆಂಡತಿಯಲ್ಲಿ ಜನಿಸಿದ ಇಬ್ಬರು ಪರಸ್ಪರವಾಗಿ ಪೂರ್ಣ ರಕ್ತ ಬಾಂಧವ್ಯವುಳ್ಳವರು ಎಂದು ಮತ್ತು ಒಬ್ಬ ಪೂರ್ವಜನಿಂದ ಆದರೆ ಬೇರೆ ಬೇರೆ ಹೆಂಡತಿಯರಲ್ಲಿ ಜನಿಸಿದ ಇಬ್ಬರು ಪರಸ್ಪರವಾಗಿ ಭಿನ್ನರಕ್ತ ಬಾಂಧವ್ಯವುಳ್ಳವರು ಎಂದು ಹೇಳಲಾಗುತ್ತದೆ;

(ಡಿ) "ಏಕೋದರ ರಕ್ತ" - ಒಬ್ಬಳೇ ಪೂರ್ವಜೆಗೆ ಬೇರೆ ಬೇರೆ ಗಂಡಂದಿರಿಂದ ಇಬ್ಬರು ಜನಿಸಿರುವಾಗ, ಅವರು ಪರಸ್ಪರವಾಗಿ ಏಕೋದರ ರಕ್ತ ಬಾಂಧವ್ಯವುಳ್ಳವರು ಎಂದು ಹೇಳಲಾಗುತ್ತದೆ;

ವಿವರಣೆ.- (ಸಿ) ಮತ್ತು (ಡಿ) ಖಂಡಗಳಲ್ಲಿ "ಪೂರ್ವಜ" ಎಂಬಲ್ಲಿ ತಂದೆಯೂ "ಪೂರ್ವಜೆ" ಎಂಬಲ್ಲಿ ತಾಯಿಯೂ ಸೇರಿರುತ್ತಾರೆ;

(ಇ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿತವಾದ ನಿಯಮಗಳಿಂದ ನಿಯಮಿಸಲಾದುದು;

(ಎಫ್) (i) ಯಾವನೇ ವ್ಯಕ್ತಿಗೆ ಸಂಬಂಧಿಸಿದಂತೆ "ಸಪಿಂಡ ಬಾಂಧವ್ಯ"ವು ತಾಯಿಯ ಮೂಲಕ ಅವಳ ಆರೋಹಣ ಪರಂಪರೆಯಲ್ಲಿ ಮೂರನೆಯ ಪೀಳಿಗೆಯವರೆಗೆ (ಮೂರನೆಯ ಪೀಳಿಗೆಯೂ ಸೇರಿ) ಮತ್ತು ತಂದೆಯ ಮೂಲಕ ಅವನ ಆರೋಹಣ ಪರಂಪರೆಯಲ್ಲಿ ಐದನೆಯ ಪೀಳಿಗೆಯವರೆಗೆ (ಐದನೆಯ ಪೀಳಿಗೆಯೂ ಸೇರಿ) ವ್ಯಾಪಿಸುತ್ತದೆ, ಪ್ರತಿಯೊಂದು ಸಂದರ್ಭದಲ್ಲೂ, ಸಂಬಂಧಪಟ್ಟ ವ್ಯಕ್ತಿಯನ್ನು ಮೊದಲನೆಯ ಪೀಳಿಗೆಯವನೆಂದು ಪರಿಗಣಿಸಿ ಅವನಿಂದ ಮೇಲಕ್ಕೆ ವಂಶಪರಂಪರೆಯನ್ನು ಗುರುತಿಸಬೇಕು;

(ii) ಇಬ್ಬರು ವ್ಯಕ್ತಿಗಳಲ್ಲಿ ಒಬ್ಬನು ಸಪಿಂಡ ಬಾಂಧವ್ಯದ ಪರಿಮಿತಿಯಲ್ಲಿ ಮತ್ತೊಬ್ಬನ ಪರಂಪರೆಯ ಪೂರ್ವಜನಾಗಿದ್ದರೆ ಅಥವಾ ಅವರಲ್ಲಿ ಪ್ರತಿಯೊಬ್ಬನಿಗೂ ಸಂಬಂಧಿಸಿದಂತೆ ಸಪಿಂಡ ಬಾಂಧವ್ಯ ಪರಿಮಿತಿಗಳಲ್ಲಿ ಇರುವ ಒಬ್ಬನೇ ಪಾರಂಪರಿಕನು ಅವರಿಗಿದ್ದರೆ, ಅವರನ್ನು ಪರಸ್ಪರ "ಸಪಿಂಡ" ರೆಂದು ಹೇಳಲಾಗುತ್ತದೆ;

(ಜಿ) "ನಿಷಿದ್ಧ ಬಾಂಧವ್ಯ ಶ್ರೇಣಿಗಳು"- ಇಬ್ಬರು ವ್ಯಕ್ತಿಗಳಲ್ಲಿ.-

(i) ಒಬ್ಬನು ಮತ್ತೊಬ್ಬನ ಪಾರಂಪರಿಕ ಪೂರ್ವಜನಾಗಿದ್ದರೆ; ಅಥವಾ

(ii) ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯ ಪಾರಂಪರಿಕ ಪೂರ್ವಜನ/ಳ ಅಥವಾ ಅಂಶಜನ/ಳ ಹೆಂಡತಿ ಅಥವಾ ಗಂಡನಾಗಿದ್ದರೆ; ಅಥವಾ

(iii) ಒಬ್ಬಳು ಮತ್ತೊಬ್ಬನ/ಳ ತಮ್ಮನ ಅಥವಾ ತಂದೆಯ ಅಥವಾ ತಾಯಿಯ ತಮ್ಮನ ಅಥವಾ ಅಜ್ಜನ ಅಥವಾ ಅಜ್ಜಿಯ ಅಣ್ಣನ ಅಥವಾ ತಮ್ಮನ ಹೆಂಡತಿಯಾಗಿದ್ದರೆ; ಅಥವಾ

(iv) ಇಬ್ಬರೂ ಅಣ್ಣ ತಮ್ಮ ಮತ್ತು ಅಕ್ಕತಂಗಿಯರಾಗಿದ್ದರೆ, ಚಿಕ್ಕಪ್ಪ, ದೊಡ್ಡಪ್ಪ ಮತ್ತು ಅವನ ಅಣ್ಣನ, ತಮ್ಮನ ಮಗಳು, ಚಿಕ್ಕಮ್ಮ ದೊಡ್ಡಮ್ಮ ಮತ್ತು ಅವಳ ಭಾವಮೈದುನನ ಮಗ ಅಥವಾ ಅಣ್ಣ ತಮ್ಮನ ಮತ್ತು ಅಕ್ಕತಂಗಿಯರ ಅಥವಾ ಇಬ್ಬರೂ ಅಣ್ಣ ತಮ್ಮಂದಿರ ಅಥವಾ ಇಬ್ಬರೂ ಅಕ್ಕತಂಗಿಯರ ಮಕ್ಕಳು ಆಗಿದ್ದರೆ

- ಅವರು ನಿಷಿದ್ಧ ಬಾಂಧವ್ಯ ಶ್ರೇಣಿಗಳೊಳಗೆ ಇರುವರೆಂದು ಹೇಳಲಾಗುತ್ತದೆ.

ವಿವರಣೆ- (ಎಫ್) ಮತ್ತು (ಜಿ) ಖಂಡಗಳ ಉದ್ದೇಶಗಳಿಗಾಗಿ, ಬಾಂಧವ್ಯ ಎಂಬುದು-

(i) ಭಿನ್ನ ಅಥವಾ ಏಕೋದರ ರಕ್ತ ಬಾಂಧವ್ಯ ಮತ್ತು ಪೂರ್ಣ ರಕ್ತ ಬಾಂಧವ್ಯವನ್ನೂ;

(ii) ಅನೌರಸ ಮತ್ತು ಔರಸ ರಕ್ತ ಬಾಂಧವ್ಯವನ್ನೂ;

(iii) ದತ್ತಕ ಮೂಲವಾದ ಮತ್ತು ರಕ್ತ ಸಂಬಂಧವಾದ ಬಾಂಧವ್ಯವನ್ನೂ ಒಳಗೊಳ್ಳುತ್ತದೆ ಮತ್ತು ಆ ಖಂಡಗಳಲ್ಲಿರುವ ಎಲ್ಲ ಬಂಧುವಾಚೀ ಶಬ್ದಗಳಿಗೆ ತದನುಸಾರವಾಗಿ ಅರ್ಥಮಾಡತಕ್ಕುದು.

4. ಅಧಿನಿಯಮದ ಅಧ್ಯಾರೋಹಿ ಪ್ರಭಾವ - ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು,-

(ಎ) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಜಾರಿಯಲ್ಲಿರುವ ಹಿಂದೂ ಕಾನೂನಿನ ಯಾವುದೇ ಶಾಸ್ತ್ರ ವಾಕ್ಯ, ನಿಯಮ ಅಥವಾ ಅರ್ಥ ವಿವರಣೆಯು ಅಥವಾ ಅಂಥ ಕಾನೂನಿನ ಭಾಗವಾಗಿರುವ ಯಾವುದೇ ರೂಢಿ ಅಥವಾ ಆಚರಣೆಯು, ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಯಾವುದೇ ವಿಷಯದ ಬಗ್ಗೆ ಪರಿಣಾಮಕಾರಿಯಾಗಿರುವುದು ಕೊನೆಗೊಳ್ಳತಕ್ಕುದು;

(ಬಿ) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನು, ಈ ಅಧಿನಿಯಮದಲ್ಲಿರುವ ಯಾವುದೇ ಉಪಬಂಧಗಳಿಗೆ ಅಸಂಗತವಾಗಿರುವ ಮಟ್ಟಿಗೆ ಪರಿಣಾಮಕಾರಿಯಾಗಿರುವುದು ಕೊನೆಗೊಳ್ಳತಕ್ಕುದು.

ಹಿಂದೂ ವಿವಾಹಗಳು

5. ಹಿಂದೂ ವಿವಾಹಕ್ಕಾಗಿ ಷರತ್ತುಗಳು.- ಈ ಕೆಳಗಿನ ಷರತ್ತುಗಳನ್ನು ಪೂರೈಸುವುದಾದರೆ, ಯಾರಾದರೂ ಇಬ್ಬರು ಹಿಂದೂಗಳ ನಡುವಣ ವಿವಾಹವನ್ನು ಅನುಷ್ಠಾಪಿಸಬಹುದು, ಎಂದರೆ:-

(i) ವಿವಾಹ ಸಮಯದಲ್ಲಿ ಯಾವ ಪಕ್ಷಕಾರರಿಗೂ ಜೀವಂತ ಹೆಂಡತಿಯಾಗಲಿ, ಗಂಡನಾಗಲಿ ಇರಬಾರದು.

(ii) ವಿವಾಹ ಕಾಲದಲ್ಲಿ, ಯಾವ ಪಕ್ಷಕಾರರಾಗಲಿ,-

(ಎ) ಮಾನಸಿಕ ಅಸ್ವಸ್ಥತೆಯ ಪರಿಣಾಮವಾಗಿ ಆ ವಿವಾಹಕ್ಕೆ ಸಿಂಧುವಾದ ಒಪ್ಪಿಗೆಯನ್ನು ಕೊಡುವುದಕ್ಕೆ ಅಸಮರ್ಥರಾಗಿರಬಾರದು; ಅಥವಾ

(ಬಿ) ಸಿಂಧುವಾದ ಒಪ್ಪಿಗೆಯನ್ನು ನೀಡಲು ಸಮರ್ಥವಾಗಿದ್ದೂ, ವಿವಾಹಕ್ಕೆ ಮತ್ತು ಮಕ್ಕಳಿಗೆ ಜನ್ಮಕೊಡಲು ಅನರ್ಹರನ್ನಾಗಿಸುವಂಥ ಅಥವಾ ಅಷ್ಟು ಮಟ್ಟಿಗಿನ ಮಾನಸಿಕ ಅಸ್ತವ್ಯಸ್ತತೆಯಿಂದ ನರಳುತ್ತಿರಬಾರದು; ಅಥವಾ

(ಸಿ) ಪದೇ ಪದೇ ಮರುಕಳಿಸುವ ಬುದ್ಧಿ ಭ್ರಮಣೆಗೆ ಒಳಗಾಗಿರಬಾರದು;

(iii) ವಿವಾಹ ಸಮಯದಲ್ಲಿ ವರನಿಗೆ ಇಪ್ಪತ್ತೊಂದು ವರ್ಷಗಳು ಮತ್ತು ವಧುವಿಗೆ ಹದಿನೆಂಟು ವರ್ಷಗಳು ಪೂರ್ತಿಯಾಗಿರಬೇಕು;

(iv) ಪಕ್ಷಕಾರರು, ಅವರಲ್ಲಿ ಪ್ರತಿಯೊಬ್ಬರಿಗೆ ಅನ್ವಯಿಸುವ ರೂಢಿ ಅಥವಾ ಆಚರಣೆಯಲ್ಲಿ ಅವರೀರ್ವರ ವಿವಾಹಕ್ಕೆ ಅವಕಾಶವಿದ್ದ ಹೊರತು, ನಿಷಿದ್ಧ ಬಾಂಧವ್ಯ ಶ್ರೇಣಿಯೊಳಗಿರಬಾರದು;

(v) ಪಕ್ಷಕಾರರು, ಅವರಲ್ಲಿ ಪ್ರತಿಯೊಬ್ಬರಿಗೆ ಅನ್ವಯಿಸುವ ರೂಢಿ ಅಥವಾ ಆಚರಣೆಯಲ್ಲಿ ಅವರೀರ್ವರ ವಿವಾಹಕ್ಕೆ ಅವಕಾಶವಿದ್ದ ಹೊರತು, ಪರಸ್ಪರ ಸಪಿಂಡರಾಗಿರಬಾರದು;

(vi) [ x x x ]

6. [ನಿರಸಿತ].

7. ಹಿಂದೂ ವಿವಾಹ ಕರ್ಮಾಚರಣೆಗಳು.- (1) ಹಿಂದೂ ವಿವಾಹವನ್ನು ಅದರ ಪಕ್ಷಕಾರರಲ್ಲಿ ಯಾರಾದರೂ ಒಬ್ಬರ ರೂಢಿಗತ ಮತ ಪ್ರಕ್ರಿಯೆಗಳು ಮತ್ತು ಕರ್ಮಾಚರಣೆಗಳಿಗೆ ಅನುಸಾರವಾಗಿ ಅನುಷ್ಠಾಪಿಸಬಹುದು.

(2) ಅಂಥ ಮತ ಪ್ರಕ್ರಿಯೆಗಳು ಮತ್ತು ಕರ್ಮಾಚರಣೆಗಳು ಸಪ್ತಪದಿಯನ್ನು ಒಳಗೊಂಡಿದ್ದರೆ (ಎಂದರೆ, ವರನೂ ವಧುವೂ ಜೊತೆಗೂಡಿ ಪವಿತ್ರಾಗ್ನಿಯ ಮುಂದೆ ಏಳು ಹೆಜ್ಜೆಗಳನ್ನಿಡುವುದು) ಏಳನೆಯ ಹೆಜ್ಜೆಯಿಟ್ಟೊಡನೆಯೇ ವಿವಾಹವು ಪೂರ್ಣಗೊಳ್ಳುವುದು ಮತ್ತು ಬದ್ಧವಾಗುವುದು.

8. ಹಿಂದೂ ವಿವಾಹಗಳ ನೋಂದಣಿ. - (1) ಹಿಂದೂ ವಿವಾಹಗಳ ರುಜುವಾತಿಗೆ ಅನುಕೂಲ ಕಲ್ಪಿಸುವ ಉದ್ದೇಶಕ್ಕಾಗಿ, ಅಂಥ ಯಾವುದೇ ವಿವಾಹದ ಪಕ್ಷಕಾರರು ತಮ್ಮ ವಿವಾಹಕ್ಕೆ ಸಂಬಂಧಿಸಿದ ವಿವರಗಳನ್ನು, ಆ ಉದ್ದೇಶಕ್ಕಾಗಿ ಇಡಲಾದ ಹಿಂದೂ ವಿವಾಹ ರಿಜಿಸ್ಟರಿನಲ್ಲಿ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ನಮೂದಿಸಿಕೊಳ್ಳಲು ರಾಜ್ಯ ಸರ್ಕಾರವು ಉಪಬಂಧವನ್ನು ಕಲ್ಪಿಸಿ ನಿಯಮಗಳನ್ನು ರಚಿಸಬಹುದು.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ಹಾಗೆ ಮಾಡುವುದು ಅವಶ್ಯಕ ಅಥವಾ ಯುಕ್ತವೆಂದು ತಾನು ಅಭಿಪ್ರಾಯಪಟ್ಟರೆ, ರಾಜ್ಯದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ (1)ನೆಯ ಉಪಪ್ರಕರಣದಲ್ಲಿ ನಿರ್ದೇಶಿಸಿದಂತೆ ವಿವರಗಳನ್ನು ನಮೂದಿಸುವುದು ಎಲ್ಲಾ ಅಥವಾ ಉಲ್ಲೇಖಿಸಬಹುದಾದ ಸಂದರ್ಭಗಳಲ್ಲಿ ಕಡ್ಡಾಯವಾಗಿರತಕ್ಕುದೆಂದು ಉಪಬಂಧಿಸಬಹುದು ಮತ್ತು ಅಂಥ ಯಾವುದೇ ನಿರ್ದೇಶನವನ್ನು ಹೊರಡಿಸಿರುವಾಗ, ಈ ಸಂಬಂಧದಲ್ಲಿ ಮಾಡಿದ ಯಾವುದೇ ನಿಯಮವನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಇಪ್ಪತ್ತೈದು ರೂಪಾಯಿಗಳ ವರೆಗಿರಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ಎಲ್ಲ ನಿಯಮಗಳನ್ನು, ಅವುಗಳನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯದ ವಿಧಾನಮಂಡಲದ ಮುಂದೆ ಇರಿಸತಕ್ಕುದು.

(4) ಹಿಂದೂ ವಿವಾಹ ರಿಜಿಸ್ಟರು ಎಲ್ಲ ಯುಕ್ತ ಸಮಯಗಳಲ್ಲಿ ಪರಿಶೀಲನೆಗೆ ಲಭ್ಯವಿರತಕ್ಕುದು, ಮತ್ತು ಅದರಲ್ಲಿರುವ ಹೇಳಿಕೆಗಳ ಬಗ್ಗೆ ಸಾಕ್ಷ್ಯವಾಗಿ ಅದು ಗ್ರಾಹ್ಯವಾಗಿರತಕ್ಕುದು ಮತ್ತು ರಿಜಿಸ್ಟ್ರಾರನು, ಅರ್ಜಿಯನ್ನು ಮಾಡಿಕೊಂಡ ಮೇಲೆ ಮತ್ತು ನಿಯಮಿಸಿದ ಫೀಜನ್ನು ತನಗೆ ಸಲ್ಲಿಸಿದ ಅನಂತರ, ಆ ರಿಜಿಸ್ಟರಿನ ಪ್ರಮಾಣೀಕೃತ ಉದ್ಧೃತ ಭಾಗಗಳನ್ನು ಕೊಡತಕ್ಕುದು.

(5) ಈ ಪ್ರಕರಣದಲ್ಲಿ ಏನೇ ಇದ್ದರೂ, ಯಾವುದೇ ಹಿಂದೂ ವಿವಾಹದ ಸಿಂಧುತ್ವವು, ಅದರ ನಮೂದನೆಯನ್ನು ಮಾಡಲು ತಪ್ಪಿದುದರಿಂದ, ಯಾವ ಪ್ರಚಾರದಿಂದಲೂ ಬಾಧಿತವಾಗತಕ್ಕುದಲ್ಲ.

ದಾಂಪತ್ಯಾಧಿಕಾರಗಳ ಪೂರ್ವಸ್ಥಿತಿ ಪ್ರಾಪ್ತಿ ಮತ್ತು ನ್ಯಾಯಿಕ ಪ್ರತ್ಯೇಕೀಕರಣ

9. ದಾಂಪತ್ಯಾಧಿಕಾರಗಳ ಪೂರ್ವಸ್ಥಿತಿ ಪ್ರಾಪ್ತಿ.- ಗಂಡನಾಗಲಿ ಹೆಂಡತಿಯಾಗಲಿ, ಯುಕ್ತ ಕಾರಣವಿಲ್ಲದೆ, ಒಬ್ಬರು ಮತ್ತೊಬ್ಬರ ಸಂಗವನ್ನು ತ್ಯಜಿಸಿರುವುದಾದರೆ ಅವರಲ್ಲಿ ಬಾಧಿತರಾದವರು, ದಾಂಪತ್ಯಾಧಿಕಾರಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಯ ಮೂಲಕ ಆವೇದಿಸಿಕೊಳ್ಳಬಹುದು ಮತ್ತು ಅಂಥ ಅರ್ಜಿಯಲ್ಲಿರುವ ಹೇಳಿಕೆಗಳ ಸತ್ಯಾಂಶದ ಬಗ್ಗೆ ಮತ್ತು ಆ ಆವೇದನವನ್ನು ಏಕೆ ಮಂಜೂರು ಮಾಡಬಾರದೆಂಬುದಕ್ಕೆ ಯಾವ ಕಾನೂನುಸಮ್ಮತ ಕಾರಣವೂ ಇಲ್ಲವೆಂಬ ಬಗ್ಗೆ ಆ ನ್ಯಾಯಾಲಯವು ಮನದಟ್ಟು ಮಾಡಿಕೊಂಡ ಮೇಲೆ, ಅದು ತದನುಸಾರವಾಗಿ ದಾಂಪತ್ಯಾಧಿಕಾರಗಳ ಪೂರ್ವಸ್ಥಿತಿ ಪ್ರಾಪ್ತಿಯ ಬಗ್ಗೆ ಡಿಕ್ರಿ ಮಾಡಬಹುದು.

ವಿವರಣೆ.- ಸಂಗವನ್ನು ತ್ಯಜಿಸಲು ಯುಕ್ತ ಕಾರಣವಿದೆಯೇ ಎಂಬ ಪ್ರಶ್ನೆಯು ಉದ್ಭವಿಸಿದಲ್ಲಿ ಅಂಥ ಯುಕ್ತವಾದ ಕಾರಣವನ್ನು ರುಜುವಾತುಪಡಿಸುವುದು ಸಂಗವನ್ನು ತ್ಯಜಿಸಿದ ವ್ಯಕ್ತಿಯ ಹೊಣೆಯಾಗಿರತಕ್ಕುದು.

10. ನ್ಯಾಯಿಕ ಪ್ರತ್ಯೇಕೀಕರಣ.- (1) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಅಥವಾ ಅನಂತರ ಅನುಷ್ಠಾಪಿತವಾಗಿರುವ ವಿವಾಹದ ಪಕ್ಷಕಾರರಲ್ಲಿ ಯಾರಾದರೂ ಒಬ್ಬರು, 13ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಕಾರಣಗಳ ಮೇಲೆ ಮತ್ತು ಹೆಂಡತಿಯ ಸಂದರ್ಭದಲ್ಲಿ ಕೂಡ ಅದರ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಕಾರಣಗಳ ಮೇಲೆ, ವಿವಾಹ ವಿಚ್ಛೇದನಕ್ಕಾಗಿ ಅರ್ಜಿಯನ್ನು ಸಲ್ಲಿಸಬಹುದಾದ ಕಾರಣಗಳೆಂಬಂತೆ ನ್ಯಾಯಿಕ ಪ್ರತ್ಯೇಕೀರಣಕ್ಕೆ ಡಿಕ್ರಿ ಕೊಡಬೇಕೆಂದು ಪ್ರಾರ್ಥಿಸಿ ಅರ್ಜಿಯನ್ನು ಸಲ್ಲಿಸಬಹುದು.

(2) ನ್ಯಾಯಿಕ ಪ್ರತ್ಯೇಕೀಕರಣಕ್ಕಾಗಿ ಡಿಕ್ರಿ ಮಾಡಿರುವಾಗ ಅರ್ಜಿದಾರನು /ಳು ಪ್ರತಿ ಅರ್ಜಿದಾರಳೊಂದಿಗೆ /ನೊಂದಿಗೆ ಆ ತರುವಾಯ ಸಹ ವಾಸಿಸಲು ಬದ್ಧನಾಗಿರುವುದಿಲ್ಲ /ಳಾಗಿರುವುದಿಲ್ಲ, ಆದರೆ, ನ್ಯಾಯಾಲಯವು, ಪಕ್ಷಕಾರರಲ್ಲಿ ಯಾರಾದರೂ ಒಬ್ಬರ ಅರ್ಜಿಯ ಮೂಲಕದ ಆವೇದನದ ಮೇಲೆ ಮತ್ತು ಆ ಅರ್ಜಿಯಲ್ಲಿರುವ ಹೇಳಿಕೆಗಳ ಸತ್ಯಾಂಶದ ಬಗ್ಗೆ ತನಗೆ ಮನದಟ್ಟಾದಲ್ಲಿ ಹಾಗೆ ಮಾಡುವುದು ನ್ಯಾಯಸಮ್ಮತವೆಂದು ಮತ್ತು ಯುಕ್ತವೆಂದು ತಾನು ಪರ್ಯಾಲೋಚಿಸಿದರೆ, ಆ ಡಿಕ್ರಿಯನ್ನು ರದ್ದುಗೊಳಿಸಬಹುದು.

ವಿವಾಹದ ಅಕೃತತೆ ಮತ್ತು ವಿವಾಹ ವಿಚ್ಛೇದನ

11. ಶೂನ್ಯ ವಿವಾಹಗಳು:- ಈ ಅಧಿನಿಯಮವು ಪ್ರಾರಂಭವಾದ ತರುವಾಯ ಅನುಷ್ಠಾಪಿತವಾದ ಯಾವುದೇ ವಿವಾಹವು, 5ನೇ ಪ್ರಕರಣದ (i), (iv) ಮತ್ತು (v)ನೇ ಖಂಡಗಳಲ್ಲಿ ಹೇಳಿದ ಯಾವುದೇ ಷರತ್ತನ್ನು ಉಲ್ಲಂಘಿಸಿದ್ದರೆ ಅದು ಅಕೃತ ಮತ್ತು ಶೂನ್ಯವಾಗತಕ್ಕುದು ಮತ್ತು ಉಭಯ ಪಕ್ಷಕಾರರಲ್ಲಿ ಯಾರಾದರೊಬ್ಬರು ಇನ್ನೊಂದು ಪಕ್ಷದ ವಿರುದ್ಧ ಸಲ್ಲಿಸಿದ ಅರ್ಜಿಯ ಮೇಲೆ ಅಕೃತತೆಯ ಡಿಕ್ರಿಯ ಮೂಲಕ, ಆ ರೀತಿ ಘೋಷಿಸಬಹುದು.

12. ಶೂನ್ಯಕರಣೀಯ ವಿವಾಹಗಳು:- (1) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ ಅನುಷ್ಠಾಪಿತವಾದ ಯಾವುದೇ ವಿವಾಹವು, ಈ ಕೆಳಕಂಡ ಕಾರಣಗಳಲ್ಲಿ ಯಾವುದೇ ಕಾರಣದ ಮೇಲೆ ಶೂನ್ಯಕರಣೀಯವಾಗಿರತಕ್ಕುದು ಮತ್ತು ಅಕೃತತೆಯ ಡಿಕ್ರಿಯ ಮೂಲಕ ಅದನ್ನು ರದ್ದುಗೊಳಿಸಬಹುದು, ಎಂದರೆ:-

(ಎ) ಪ್ರತಿ ಅರ್ಜಿದಾರನ ನಪುಂಸಕತ್ವದ ಕಾರಣದಿಂದಾಗಿ ನಿಷೇಕಪ್ರಸ್ತವನ್ನು ನೆರವೇರಿಸಲಾಗಿಲ್ಲ; ಅಥವಾ

(ಬಿ) ವಿವಾಹವು 5ನೇ ಪ್ರಕರಣದ (ii)ನೇ ಖಂಡದಲ್ಲಿ ಹೇಳಿದ ಷರತ್ತನ್ನು ಉಲ್ಲಂಘಿಸಿ ನಡೆದಿದೆ; ಅಥವಾ

(ಸಿ) ಅರ್ಜಿದಾರನ ಸಮ್ಮತಿಯನ್ನು, ಅಥವಾ ಶಿಶುವಿವಾಹ ಪ್ರತಿಬಂಧ (ತಿದ್ದುಪಡಿ) ಅಧಿನಿಯಮ, 1978ರ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಇದ್ದಂತೆ 5ನೇ ಪ್ರಕರಣದ ಮೇರೆಗೆ ಅರ್ಜಿದಾರನ ವಿವಾಹಾರ್ಥ ಪಾಲಕನ ಸಮ್ಮತಿಯು ಅಗತ್ಯವಾಗಿದ್ದಿರುವಲ್ಲಿ, ಅಂಥ ಪಾಲಕನ ಸಮ್ಮತಿಯನ್ನು ಬಲವಂತದಿಂದ ಅಥವಾ ಪ್ರತಿ ಅರ್ಜಿದಾರನಿಗೆ ಸಂಬಂಧಿಸಿದ ಯಾವುದೇ ಸಮಾರಂಭದ ಸ್ವರೂಪಕ್ಕೆ ಅಥವಾ ಯಾವುದೇ ಮುಖ್ಯ ಸಂಗತಿಗೆ ಅಥವಾ ಸನ್ನಿವೇಶಕ್ಕೆ ಸಂಬಂಧಿಸಿದಂತೆ ಮೋಸದಿಂದ ಪಡೆದುಕೊಳ್ಳಲಾಗಿದೆ; ಅಥವಾ

(ಡಿ) ಪ್ರತಿ ಅರ್ಜಿದಾರಳು ಅರ್ಜಿದಾರನಲ್ಲದ ಬೇರೆ ವ್ಯಕ್ತಿಯಿಂದ ವಿವಾಹ ಕಾಲದಲ್ಲಿ ಗರ್ಭಿಣಿಯಾಗಿದ್ದಳು.

(2) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ವಿವಾಹವನ್ನು ರದ್ದುಗೊಳಿಸುವುದಕ್ಕಾಗಿ ಯಾವುದೇ ಅರ್ಜಿಯನ್ನು-

(ಎ) (1)ನೇ ಉಪಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿಸಿದ ಕಾರಣದ ಮೇಲೆ -

(i) ಸಂದರ್ಭಾನುಸಾರ, ಬಲವಂತವು ಕೊನೆಗೊಂಡ ಅಥವಾ ಮೋಸವು ತಿಳಿದುಬಂದ ಒಂದು ವರ್ಷದ ಅನಂತರ ಅರ್ಜಿಯನ್ನು ಸಲ್ಲಿಸಿದರೆ; ಅಥವಾ

(ii) ಸಂದರ್ಭಾನುಸಾರ, ಬಲವಂತವು ಕೊನೆಗೊಂಡು ಅಥವಾ ಮೋಸವು ತಿಳಿದುಬಂದ ತರುವಾಯವೂ ಅರ್ಜಿದಾರನು/ಳು ಅವನ ಅಥವಾ ಅವಳ ಪೂರ್ಣ ಸಮ್ಮತಿಯಿಂದ ವಿವಾಹದ ಮತ್ತೊಬ್ಬ ಪಕ್ಷಕಾರನೊಡನೆ/ಳೊಡನೆ ಗಂಡನಂತೆ ಅಥವಾ ಹೆಂಡತಿಯಂತೆ ವಾಸಿಸಿದ್ದರೆ

- ಸ್ವೀಕರಿಸತಕ್ಕುದಲ್ಲ.

(ಬಿ) (1)ನೇ ಉಪಪ್ರಕರಣದ (ಡಿ) ಖಂಡದಲ್ಲಿ ಉಲ್ಲೇಖಿಸಿದ ಕಾರಣದ ಮೇಲೆ -

(i) ಆರೋಪಿಸಿದ ಸಂಗತಿಗಳನ್ನು ವಿವಾಹ ಕಾಲದಲ್ಲಿ ಅರ್ಜಿದಾರನು ಅರಿತಿರಲಿಲ್ಲವೆಂದು;

(ii) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅನುಷ್ಠಾಪಿತವಾದ ವಿವಾಹದ ಸಂದರ್ಭದಲ್ಲಿ, ಅಂಥ ಪ್ರಾರಂಭದ ಒಂದು ವರ್ಷದೊಳಗಾಗಿ ಮತ್ತು ಅಂಥ ಪ್ರಾರಂಭದ ಅನಂತರ ಅನುಷ್ಠಾಪಿತವಾದ ವಿವಾಹದ ಸಂದರ್ಭದಲ್ಲಿ, ವಿವಾಹ ನಡೆದ ತಾರೀಖಿನಿಂದ ಒಂದು ವರ್ಷದೊಳಗಾಗಿ ವ್ಯವಹರಣೆಗಳನ್ನು ಹೂಡಲಾಗಿದೆಯೆಂದು; ಮತ್ತು

(iii) ಉಕ್ತ ಕಾರಣವಿರುವುದು ಅರ್ಜಿದಾರನಿಗೆ ತಿಳಿದು ಬಂದ ಬಳಿಕ ಅರ್ಜಿದಾರನ ಸಮ್ಮತಿಯಿಂದ ವೈವಾಹಿಕ ಸಂಭೋಗವು ನಡೆದಿಲ್ಲವೆಂದು

-ನ್ಯಾಯಾಲಯಕ್ಕೆ ಮನದಟ್ಟಾದ ಹೊರತು ಸ್ವೀಕರಿಸತಕ್ಕುದಲ್ಲ.

13. ವಿವಾಹ ವಿಚ್ಛೇದನ.- (1) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ ಅನುಷ್ಠಾಪಿತವಾದ ಯಾವುದೇ ವಿವಾಹವನ್ನು ಗಂಡನು ಅಥವಾ ಹೆಂಡತಿಯು ಸಲ್ಲಿಸಿದ ಅರ್ಜಿಯ ಮೇಲೆ, ವಿವಾಹದ ಇತರ ಪಕ್ಷಕಾರನು/ಳು,-

(i) ವಿವಾಹವು ಅನುಷ್ಠಾಪಿತವಾದ ತರುವಾಯ, ತನ್ನ ಹೆಂಡತಿ ಅಥವಾ ಗಂಡನಲ್ಲದ ಅನ್ಯ ವ್ಯಕ್ತಿಯೊಂದಿಗೆ ಸ್ವಯಿಚ್ಛೆಯಿಂದ ಲೈಂಗಿಕ ಸಂಭೋಗ ಮಾಡಿರುವ; ಅಥವಾ

(iಎ) ವಿವಾಹವು ಅನುಷ್ಠಾಪಿತವಾದ ತರುವಾಯ, ಅರ್ಜಿದಾರನೊಡನೆ/ಳೊಡನೆ ಕ್ರೂರವಾಗಿ ವರ್ತಿಸುವ; ಅಥವಾ

(iಬಿ) ಅರ್ಜಿಯನ್ನು ಸಲ್ಲಿಸಿದ ನಿಕಟಪೂರ್ವದ ಎರಡು ವರ್ಷಗಳಿಗೆ ಕಡಿಮೆಯಿಲ್ಲದಷ್ಟು ಕಾಲ ನಿರಂತರವಾಗಿ ಅರ್ಜಿದಾರನನ್ನು/ಳನ್ನು ತ್ಯಜಿಸಿರುವ; ಅಥವಾ

(ii) ಮತಾಂತರದಿಂದ ಹಿಂದೂ ಆಗಿರುವುದು ಕೊನೆಗೊಂಡಿರುವ; ಅಥವಾ

(iii) ಗುಣಪಡಿಸಲಾಗದ ಅಸ್ವಸ್ಥ ಚಿತ್ತದಿಂದಿರುವ, ಅಥವಾ ಅರ್ಜಿದಾರನು/ಳು ಪ್ರತಿ ಅರ್ಜಿದಾರನೊಂದಿಗೆ/ಳೊಂದಿಗೆ ಜೀವನ ನಡೆಸಬಹುದೆಂದು ನಿರೀಕ್ಷಿಸಲಾಗದಂಥ ರೀತಿಯ ಮತ್ತು ಅಷ್ಟರಮಟ್ಟಿಗಿನ ಮಾನಸಿಕ ಅಸ್ತವ್ಯಸ್ತತೆಯಿಂದ ನಿರಂತರವಾಗಿ ಅಥವಾ ಆಗಾಗ್ಗೆ ಬಳಲುತ್ತಿರುವ;

ವಿವರಣೆ.- ಈ ಖಂಡದಲ್ಲಿ,-

(ಎ) "ಮಾನಸಿಕ ಅಸ್ತವ್ಯಸ್ತತೆ" ಎಂದರೆ, ಮಾನಸಿಕ ಅನಾರೋಗ್ಯ, ಮನಸ್ಸಿನ ನಿಧಾನ ಬೆಳವಣಿಗೆ ಅಥವಾ ಅಪೂರ್ಣ ಬೆಳವಣಿಗೆ, ಅಸ್ಥಿಮಿತ ಬುದ್ಧಿ ಅಥವಾ ಮನಸ್ಸಿನ ಇತರ ಯಾವುದೇ ಅಸ್ತವ್ಯಸ್ತತೆ ಅಥವಾ ದೌರ್ಬಲ್ಯ ಮತ್ತು ಇದು ಮತಿಭ್ರಮಣೆಯನ್ನು ಒಳಗೊಳ್ಳುತ್ತದೆ;

(ಬಿ) "ಅಸ್ಥಿಮಿತ ಬುದ್ಧಿ" ಎಂದರೆ, (ಸಾಮಾನ್ಯ ಮಟ್ಟಕ್ಕಿಂತ ಕಡಿಮೆ ಬುದ್ಧಿಯನ್ನು ಒಳಗೊಂಡಿರಲಿ ಇಲ್ಲದಿರಲಿ) ಇತರ ಪಕ್ಷವು ಅಸಾಮಾನ್ಯವಾಗಿ ಆಕ್ರಮಣಕಾರಿ ಅಥವಾ ತೀವ್ರ ಹೊಣೆಗೇಡಿಯಾಗುವಂತೆ ಮಾಡುವ ಮತ್ತು ವೈದ್ಯಕೀಯ ಚಿಕಿತ್ಸೆಯು ಅವಶ್ಯಕತೆಯಿರುವ ಅಥವಾ ಇಲ್ಲದಿರುವ ಅಥವಾ ವೈದ್ಯಕೀಯ ಚಿಕಿತ್ಸೆಗೆ ಒಳಪಡುವ ಅಥವಾ ಒಳಪಡದಿರುವ ಮನಸ್ಸಿನ ನಿರಂತರ ಅಸ್ತವ್ಯಸ್ತತೆಯನ್ನು ಅಥವಾ ದೌರ್ಬಲ್ಯವನ್ನು ಒಳಗೊಳ್ಳುತ್ತದೆ; ಅಥವಾ

(iv) ತೀವ್ರತರವಾದ ಮತ್ತು ಗುಣಪಡಿಸಲಾಗದ ಕುಷ್ಠರೋಗದಿಂದ ಬಳಲುತ್ತಿರುವ; ಅಥವಾ

(v) ಅಂಟು ಸ್ವರೂಪದ ಗುಹ್ಯ ರೋಗದಿಂದ ಬಳಲುತ್ತಿರುವ; ಅಥವಾ

(vi) ಯಾವುದೇ ಧಾರ್ಮಿಕ ಪಂಥವನ್ನು ಅಂಗೀಕರಿಸಿ ಪ್ರಪಂಚವನ್ನು ತ್ಯಜಿಸಿರುವ; ಅಥವಾ

(vii) ಆ ಪಕ್ಷಕಾರನು/ಳು ಜೀವಂತವಾಗಿದ್ದಿದ್ದರೆ ಆ ಬಗ್ಗೆ ಸಹಜವಾಗಿಯೇ ಕೇಳಿರಬಹುದಾಗಿದ್ದ ವ್ಯಕ್ತಿಗಳು ಏಳು ವರ್ಷಗಳಿಂದ ಅಥವಾ ಅದಕ್ಕೂ ಹೆಚ್ಚು ಕಾಲದಿಂದ ಅವನು/ಳು ಜೀವಂತವಾಗಿದ್ದಾನೆಂದು/ಳೆಂದು ಕೇಳದಿರುವ

- ಕಾರಣದ ಮೇಲೆ, ವಿವಾಹ ವಿಚ್ಛೇದನ ಡಿಕ್ರಿಯ ಮೂಲಕ ವಿಘಟಿಸಬಹುದು.

ವಿವರಣೆ.- ಈ ಉಪಪ್ರಕರಣದಲ್ಲಿ, "ತ್ಯಜಿಸುವುದು" ಎಂದರೆ, ವಿವಾಹದ ಮತ್ತೊಬ್ಬ ಪಕ್ಷಕಾರನು/ಳು ಯುಕ್ತ ಕಾರಣವಿಲ್ಲದೆ ಮತ್ತು ಅರ್ಜಿದಾರನ/ಳ ಸಮ್ಮತಿಯಿಲ್ಲದೆ ಮತ್ತು ಅವನ/ಳ ಇಚ್ಛೆಗೆ ವಿರುದ್ಧವಾಗಿ ಅರ್ಜಿದಾರನನ್ನು/ಳನ್ನು ತ್ಯಜಿಸುವುದು ಮತ್ತು ಇದು ಅರ್ಜಿದಾರನ /ಳ ಬಗ್ಗೆ ವಿವಾಹದ ಮತ್ತೊಬ್ಬ ಪಕ್ಷಕಾರನ/ಳ ಬುದ್ಧಿ ಪೂರ್ವಕ ನಿರ್ಲಕ್ಷ್ಯವನ್ನು ಒಳಗೊಳ್ಳುತ್ತದೆ ಮತ್ತು ಅದರ ವ್ಯಾಕರಣ ವ್ಯತ್ಯಾಸಗಳನ್ನು ಮತ್ತು ಸಜಾತೀಯ ಪದಗಳನ್ನು ತದನುಸಾರವಾಗಿ ಅರ್ಥ ಮಾಡತಕ್ಕುದು.

(1ಎ) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ ಅನುಷ್ಠಾಪಿತವಾದ ವಿವಾಹದ ಪಕ್ಷಕಾರರಲ್ಲಿ ಯಾರೇ ಒಬ್ಬರು,-

(i) ಅವರು ಪಕ್ಷಕಾರರಾಗಿದ್ದ ವ್ಯವಹರಣೆಯಲ್ಲಿ ನ್ಯಾಯಿಕ ಪ್ರತ್ಯೇಕೀಕರಣಕ್ಕಾಗಿ ಡಿಕ್ರಿ ಮಾಡಿದ ತರುವಾಯ ಒಂದು ವರ್ಷದ ಅಥವಾ ಅದಕ್ಕಿಂತ ಹೆಚ್ಚಿನ ಕಾಲಾವಧಿಯವರೆಗೆ ವಿವಾಹದ ಪಕ್ಷಕಾರರಲ್ಲಿ ಸಹವಾಸ ಪುನರಾರಂಭವಾಗಿಲ್ಲವೆಂಬ; ಅಥವಾ

(ii) ಅವರು ಪಕ್ಷಕಾರರಾಗಿದ್ದ ವ್ಯವಹರಣೆಯಲ್ಲಿ ದಾಂಪತ್ಯಾಧಿಕಾರಗಳ ಪೂರ್ವ ಸ್ಥಿತಿ ಪ್ರಾಪ್ತಿಗಾಗಿ ಡಿಕ್ರಿ ಮಾಡಿದ ತರುವಾಯ ಒಂದು ವರ್ಷದ ಅಥವಾ ಅದಕ್ಕಿಂತ ಮೇಲ್ಪಟ್ಟ ಕಾಲಾವಧಿಯವರೆಗೆ ವಿವಾಹದ ಪಕ್ಷಕಾರರಲ್ಲಿ ದಾಂಪತ್ಯಾಧಿಕಾರಗಳ ಪೂರ್ವ ಸ್ಥಿತಿ ಪ್ರಾಪ್ತಿಯಾಗಿಲ್ಲ ಎಂಬ ಕಾರಣದ ಮೇಲೆ, ವಿವಾಹ ವಿಚ್ಛೇದನ ಡಿಕ್ರಿಯ ಮೂಲಕ ವಿವಾಹದ ವಿಘಟನೆಗಾಗಿ ಅರ್ಜಿಯನ್ನು ಕೂಡ ಸಲ್ಲಿಸಬಹುದು.

(2) ಹೆಂಡತಿಯೂ ಕೂಡ,-

(i) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅನುಷ್ಠಾಪಿತವಾದ ವಿವಾಹದ ಸಂದರ್ಭದಲ್ಲಿ, ಗಂಡನು ಆ ಪ್ರಾರಂಭಕ್ಕೆ ಮುಂಚೆ ಪುನಃ ವಿವಾಹವಾಗಿದ್ದನು ಅಥವಾ ಅರ್ಜಿದಾರಳ ವಿವಾಹವು ಅನುಷ್ಠಾಪಿತವಾಗುವ ಕಾಲದಲ್ಲಿ ಆ ಪ್ರಾರಂಭಕ್ಕೆ ಮುಂಚೆ ತನ್ನ ಗಂಡನ ವಿವಾಹದ ಮತ್ತೊಬ್ಬ ಹೆಂಡತಿಯು ಜೀವಿಸಿದ್ದಳು ಎಂಬ:

ಪರಂತು, ಈ ಎರಡೂ ಸಂದರ್ಭಗಳಲ್ಲಿ ಅರ್ಜಿಸಲ್ಲಿಸುವ ಕಾಲಕ್ಕೆ ಆ ಮತ್ತೊಬ್ಬ ಹೆಂಡತಿಯು ಜೀವಿಸಿರಬೇಕು; ಅಥವಾ

(ii) ವಿವಾಹವು ಅನುಷ್ಠಾಪಿತವಾದಾಗಿನಿಂದ, ಗಂಡನು ಬಲಾತ್ ಸಂಭೋಗ, ಪುಂಮೈಥುನ, ಅಥವಾ ಪಶುಗಮನದ ದೋಷಿಯಾಗಿದ್ದಾನೆ ಎಂಬ

- ಕಾರಣದ ಮೇಲೆ; ಅಥವಾ

(iii) ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ, 1956ರ 18ನೇ ಪ್ರಕರಣದ ಮೇರೆಗಿನ ಒಂದು ದಾವೆಯಲ್ಲಿ, ಅಥವಾ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 125ನೇ ಪ್ರಕರಣದ ಮೇರೆಗಿನ (ಅಥವಾ ದಂಡ ಪ್ರಕ್ರಿಯಾ ಸಂಹಿತೆ, 1898ರ (1898ರ 5) 488ನೇ ಸಂವಾದಿ ಪ್ರಕರಣದ ಮೇರೆಗಿನ ವ್ಯವಹರಣೆಯಲ್ಲಿ, ಹೆಂಡತಿಯು ಬೇರೆಯಾಗಿ ಜೀವನ ನಡೆಸುತ್ತಿದ್ದಾಗ್ಯೂ, ಅವಳಿಗೆ ಜೀವನಾಂಶವನ್ನು ಕೊಡಬೇಕೆಂದು ಗಂಡನ ವಿರುದ್ಧ 'ಸಂದರ್ಭಾನುಸಾರ' ಡಿಕ್ರಿ ಅಥವಾ ಆದೇಶವನ್ನು ಮಾಡಿರುವಲ್ಲಿ ಮತ್ತು ಅಂಥ ಡಿಕ್ರಿ ಅಥವಾ ಆದೇಶವನ್ನು ಮಾಡಿದ ದಿನಾಂಕದಿಂದ ಒಂದು ವರ್ಷದ ಅಥವಾ ಅದಕ್ಕೂ ಹೆಚ್ಚಿನ ಕಾಲಾವಧಿಯವರೆಗೆ ಪಕ್ಷಕಾರರು ಸಹವಾಸವನ್ನು ಪುನರಾರಂಭಿಸದಿರುವಲ್ಲಿ; ಅಥವಾ

(iv) ಅವಳ ವಿವಾಹವು (ನಿಷೇಕ ಪ್ರಸ್ತವಾಗಿರಲಿ ಇಲ್ಲದಿರಲಿ) ಅವಳಿಗೆ ಹದಿನೈದು ವರ್ಷಗಳು ತುಂಬುವ ಮೊದಲು ಅನುಷ್ಠಾಪಿತವಾಗಿರುವಲ್ಲಿ ಮತ್ತು ಅವಳು ಆ ವಯಸ್ಸು ತುಂಬಿದ ಅನಂತರ, ಆದರೆ ಹದಿನೆಂಟು ವರ್ಷಗಳು ತುಂಬುವ ಮೊದಲು ಆ ವಿವಾಹವನ್ನು ನಿರಾಕರಿಸಿದಲ್ಲಿ

- ವಿವಾಹ ವಿಚ್ಛೇದನ ಡಿಕ್ರಿಯ ಮೂಲಕ ತನ್ನ ವಿವಾಹದ ವಿಘಟನೆ ಮಾಡಬೇಕೆಂದು ಅರ್ಜಿಸಲ್ಲಿಸಬಹುದು.

ವಿವರಣೆ.- ಈ ಖಂಡವು, ವಿವಾಹ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1976ರ ಪ್ರಾರಂಭಕ್ಕೆ ಮೊದಲು ವಿವಾಹವು ಅನುಷ್ಠಾಪಿತವಾಗಿರಲಿ, ತರುವಾಯ ಅನುಷ್ಠಾಪಿತವಾಗಿರಲಿ ಅದಕ್ಕೆ ಅನ್ವಯವಾಗುತ್ತದೆ.

13ಎ. ವಿವಾಹ ವಿಚ್ಛೇದನದ ವ್ಯವಹರಣೆಗಳಲ್ಲಿ ಬದಲಿ ಪರಿಹಾರ.- ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ, ವಿವಾಹ ವಿಚ್ಛೇದನದ ಡಿಕ್ರಿಯ ಮೂಲಕ ವಿವಾಹದ ವಿಘಟನೆಗಾಗಿ ಸಲ್ಲಿಸಿದ ಅರ್ಜಿಯ ಮೇರೆಗೆ, 13ನೇ ಪ್ರಕರಣದ (1)ನೇ ಉಪಪ್ರಕರಣದ (ii), (vi) ಮತ್ತು (vii)ನೇ ಖಂಡಗಳಲ್ಲಿ ನಮೂದಿಸಿದ ಕಾರಣಗಳ ಮೇಲೆ ಅದು ಆಧಾರಿತವಾಗಿದ್ದ ಹೊರತು, ನ್ಯಾಯಾಲಯವು ಮೊಕದ್ದಮೆಯು ಇರುವಷ್ಟರ ಮಟ್ಟಿಗೆ ಪರಿಸ್ಥಿತಿಗಳನ್ನು ಗಮನದಲ್ಲಿರಿಸಿಕೊಂಡು ತಾನು ಹಾಗೆ ಮಾಡುವುದು ನ್ಯಾಯೋಚಿತವೆಂದು ಪರಿಗಣಿಸಿದರೆ, ಅದಕ್ಕೆ ಬದಲಾಗಿ ನ್ಯಾಯಿಕ ಪ್ರತ್ಯೇಕೀಕರಣಕ್ಕಾಗಿ ಡಿಕ್ರಿಯನ್ನು ಹೊರಡಿಸಬಹುದು.

13ಬಿ. ಪರಸ್ಪರ ಸಮ್ಮತಿಯ ಮೂಲಕ ವಿವಾಹ ವಿಚ್ಛೇದನ.- (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ವಿವಾಹವಿಚ್ಛೇದನ ಡಿಕ್ರಿಯ ಮೂಲಕ ವಿವಾಹದ ವಿಘಟನೆಗಾಗಿ, ಅಂಥ ವಿವಾಹವು ವಿವಾಹ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1976ರ ಪ್ರಾರಂಭಕ್ಕೆ ಮೊದಲು ಅನುಷ್ಠಾಪಿತವಾಗಿರಲಿ ತರುವಾಯ ಅನುಷ್ಠಾಪಿತವಾಗಿರಲಿ, ಒಂದು ವಿವಾಹದ ಉಭಯ ಪಕ್ಷಕಾರರು ವರ್ಷ ಅಥವಾ ಹೆಚ್ಚಿನ ಕಾಲಾವಧಿಯಿಂದ ಬೇರೆ ಬೇರೆಯಾಗಿ ವಾಸಿಸುತ್ತಿದ್ದೇವೆ, ತಾವಿಬ್ಬರೂ ಕೂಡಿ ಇರಲು ಸಾಧ್ಯವಾಗಿಲ್ಲ ಮತ್ತು ವಿವಾಹವನ್ನು ವಿಘಟಿಸಬೇಕೆಂದು ತಾವಿಬ್ಬರೂ ಪರಸ್ಪರವಾಗಿ ಒಪ್ಪಿಕೊಂಡಿದ್ದೇವೆ ಎಂಬ ಕಾರಣದ ಮೇಲೆ ಅವರು ಒಟ್ಟಿಗೆ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಅರ್ಜಿಯನ್ನು ಸಲ್ಲಿಸಿದ ದಿನಾಂಕದ ತರುವಾಯ ಆರು ತಿಂಗಳುಗಳಿಗೆ ಮೇಲಲ್ಲದ ಮತ್ತು ಉಕ್ತ ದಿನಾಂಕದ ತರುವಾಯ ಹದಿನೆಂಟು ತಿಂಗಳುಗಳಿಗೆ ಮೀರದ ಅವಧಿಯೊಳಗಾಗಿ, ಎರಡೂ ಪಕ್ಷದವರು ಮಾಡಿಕೊಂಡ ಕೋರಿಕೆಯ ಮೇರೆಗೆ, ಈ ಮಧ್ಯ ಅರ್ಜಿಯನ್ನು ಹಿಂತೆಗೆದುಕೊಂಡಿರದಿದ್ದರೆ ನ್ಯಾಯಾಲಯವು ಪಕ್ಷಕಾರರ ಆಕ್ಷೇಪಣೆಗಳನ್ನು ಕೇಳಿ ಮತ್ತು ತಾನು ಸೂಕ್ತವೆಂದು ಆಲೋಚಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ವಿವಾಹವು ಅನುಷ್ಠಾಪಿತವಾಗಿದೆಯೆಂದು ಮತ್ತು ಅರ್ಜಿಯಲ್ಲಿನ ದೃಢೋಕ್ತಿಗಳು ಸತ್ಯವೆಂದು ತನಗೆ ಮನದಟ್ಟಾದ ಮೇಲೆ ಡಿಕ್ರಿಯ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ವಿವಾಹವು ವಿಘಟಿತವಾಗಬೇಕೆಂದು ಘೋಷಿಸಿ ವಿವಾಹ ವಿಚ್ಛೇದನದ ಡಿಕ್ರಿಯನ್ನು ಹೊರಡಿಸತಕ್ಕುದು.

14. ವಿವಾಹದ ಅನಂತರದ ಒಂದು ವರ್ಷದೊಳಗಾಗಿ ವಿವಾಹ ವಿಚ್ಛೇದನಕ್ಕಾಗಿ ಯಾವ ಅರ್ಜಿಯನ್ನೂ ಸಲ್ಲಿಸಲಾಗದು.- (1) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಅರ್ಜಿಯನ್ನು ಸಲ್ಲಿಸುವ ತಾರೀಖಿಗೆ ವಿವಾಹದ ತಾರೀಖಿನಿಂದ ಒಂದು ವರ್ಷವು ಗತಿಸಿದ್ದ ಹೊರತು, ವಿವಾಹ ವಿಚ್ಛೇದನ ಡಿಕ್ರಿಯ ಮೂಲಕ ವಿವಾಹದ ವಿಘಟನೆಗಾಗಿ ಯಾವುದೇ ಅರ್ಜಿಯನ್ನು ಸ್ವೀಕರಿಸಲು ಯಾವ ನ್ಯಾಯಾಲಯವೂ ಸಕ್ಷಮವಾಗಿರತಕ್ಕುದಲ್ಲ:

ಪರಂತು, ಈ ಸಂಬಂಧದಲ್ಲಿ ಉಚ್ಚ ನ್ಯಾಯಾಲಯವು ರಚಿಸಬಹುದಾದಂಥ ನಿಯಮಗಳಿಗನುಸಾರವಾಗಿ ಅರ್ಜಿಯನ್ನು ಮಾಡಿಕೊಂಡ ಮೇಲೆ ಅರ್ಜಿದಾರನಿಗೆ ಅಸಾಧಾರಣ ಕಷ್ಟವಾಗಿರುವ ಅಥವಾ ಪ್ರತಿ ಅರ್ಜಿದಾರನಿಗೆ ಸಂಬಂಧಪಟ್ಟಂತೆ ಅಸಾಧಾರಣ ದುರಾಚಾರದ ಸಂದರ್ಭವಿದೆ ಎಂಬ ಕಾರಣದ ಮೇಲೆ ವಿವಾಹವಾದ ತಾರೀಖಿನಿಂದ ಒಂದು ವರ್ಷವು ಗತಿಸುವುದಕ್ಕೆ ಮುಂಚೆ, ಆ ನ್ಯಾಯಾಲಯವು ಅರ್ಜಿಸಲ್ಲಿಸಲು ಅವಕಾಶ ಕೊಡಬಹುದು, ಆದರೆ ಅರ್ಜಿದಾರನು ಯಾವುದೇ ತಪ್ಪು ನಿರೂಪಣೆಯಿಂದ ಅಥವಾ ಮೊಕದ್ದಮೆಯ ಸ್ವರೂಪವನ್ನು ಮರೆ ಮಾಡಿ ಅರ್ಜಿಯನ್ನು ಸಲ್ಲಿಸಲು ಅನುಮತಿ ಪಡೆದುಕೊಂಡಿರುನೆಂದು ಅರ್ಜಿ ವಿಚಾರಣೆ ಮಾಡುವಾಗ ನ್ಯಾಯಾಲಯಕ್ಕೆ ಕಂಡುಬಂದರೆ, ನ್ಯಾಯಾಲಯವು ಡಿಕ್ರಿಯನ್ನು ಮಾಡುವುದಾದರೆ, ವಿವಾಹದ ತಾರೀಖಿನಿಂದ ಒಂದು ವರ್ಷವು ಕಳೆಯುವ ತನಕ ಅಂಥ ಡಿಕ್ರಿಯು ಪರಿಣಾಮಕಾರಿಯಾಗತಕ್ಕುದಲ್ಲವೆಂಬ ಷರತ್ತಿಗೆ ಒಳಪಟ್ಟು ಹಾಗೆ ಮಾಡಬಹುದು ಅಥವಾ ಹಾಗೆ ವಜಾ ಮಾಡಲಾದ ಅರ್ಜಿಯನ್ನು ಸಮರ್ಥಿಸುವಲ್ಲಿ ಹೇಳಲಾದ ಅಂಥವೇ ಅಥವಾ ಸಾರತ: ಅಂಥವೇ ಸಂಗತಿಗಳ ಮೇಲೆ ಸದರಿ ಒಂದು ವರ್ಷವು ಗತಿಸಿದ ತರುವಾಯ ಸಲ್ಲಿಸಬಹುದಾದ ಯಾವುದೇ ಅರ್ಜಿಗೆ ಪ್ರತಿಕೂಲವಾಗದಂತೆ ಆ ಅರ್ಜಿಯನ್ನು ವಜಾ ಮಾಡಬಹುದು.

(2) ವಿವಾಹದ ತಾರೀಖಿನಿಂದ ಒಂದು ವರ್ಷವು ಗತಿಸುವುದಕ್ಕೆ ಮುಂಚೆಯೇ ವಿವಾಹ ವಿಚ್ಛೇದನಕ್ಕಾಗಿ ಅರ್ಜಿಸಲ್ಲಿಸಲು ಅನುಮತಿ ಕೋರಿ ಮಾಡಿಕೊಂಡಿರುವ ಅರ್ಜಿಯನ್ನು ಈ ಪ್ರಕರಣದ ಮೇರೆಗೆ ಇತ್ಯರ್ಥಗೊಳಿಸುವಾಗ, ಅಂಥ ವಿವಾಹದಿಂದ ಆಗಿರುವ ಮಕ್ಕಳ ಹಿತಗಳಿಗೂ ಮತ್ತು ಉಕ್ತ ಒಂದು ವರ್ಷದ ಕಾಲಾವಧಿಯು ಮುಕ್ತಾಯಗೊಳ್ಳುವ ಮುಂಚೆ ಪಕ್ಷಕಾರರ ನಡುವೆ ಮರು ಹೊಂದಾಣಿಕೆಯಾಗುವ ಸಕಾರಣ ಸಂಭಾವ್ಯತೆ ಇದೆಯೇ ಎಂಬ ಪ್ರಶ್ನೆಗೂ ನ್ಯಾಯಾಲಯವು ಗಮನ ಕೊಡತಕ್ಕುದು.

15. ವಿವಾಹ ವಿಚ್ಛೇದನ ಹೊಂದಿದ ವ್ಯಕ್ತಿಗಳು ಮತ್ತೆ ಯಾವಾಗ ವಿವಾಹವಾಗಬಹುದು.- ವಿವಾಹ ವಿಚ್ಛೇದನ ಡಿಕ್ರಿಯ ಮೂಲಕ ವಿವಾಹವು ವಿಘಟಿತಗೊಂಡಿರುವಾಗ, ಮತ್ತು ಅಂಥ ಡಿಕ್ರಿಯ ವಿರುದ್ಧ ಅಪೀಲು ಮಾಡುವ ಅಧಿಕಾರವಿಲ್ಲದಿದ್ದರೆ ಅಥವಾ ಅಪೀಲು ಮಾಡುವ ಅಂಥ ಅಧಿಕಾರವಿದ್ದೂ ಅಪೀಲು ಹಾಕದೆ ಅಪೀಲು ಮಾಡುವ ಕಾಲವು ಗತಿಸಿದ್ದರೆ, ಅಥವಾ ಅಪೀಲು ಮಾಡಲಾಗಿದ್ದು ಅದು ವಜಾ ಆಗಿದ್ದರೆ, ಆ ವಿವಾಹದ ಪಕ್ಷಕಾರರಲ್ಲಿ ಯಾರೊಬ್ಬರು ಮತ್ತೆ ವಿವಾಹವಾಗುವುದು ಕಾನೂನು ಸಮ್ಮತವಾಗಿರತಕ್ಕುದು.

16. ಶೂನ್ಯ ಮತ್ತು ಶೂನ್ಯಕರಣೀಯ ವಿವಾಹಜನಿತ ಮಕ್ಕಳ ಕಾನೂನು ಸಮ್ಮತತೆ.- (1) 11ನೇ ಪ್ರಕರಣದ ಮೇರೆಗೆ ಒಂದು ವಿವಾಹವು ಅಕೃತ ಮತ್ತು ಶೂನ್ಯವಾಗಿದ್ದಾಗ್ಯೂ ಆ ವಿವಾಹವು ಸಿಂಧುವಾಗಿದ್ದಿದ್ದರೆ ಅಂಥ ವಿವಾಹದಿಂದಾಗಿ ಔರಸವೆನಿಸಬಹುದಾಗಿದ್ದಂಥ ಯಾವುದೇ ಮಗುವು, ವಿವಾಹ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1976ರ ಪ್ರಾರಂಭಕ್ಕೆ ಮೊದಲು ಜನಿಸಿರಲಿ, ತರುವಾಯ ಜನಿಸಿರಲಿ ಮತ್ತು ಅಂಥ ವಿವಾಹದ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಅಕೃತತೆಯ ಡಿಕ್ರಿಯು ಆಗಿರಲಿ ಅಥವಾ ಆಗಿರದಿರಲಿ ಮತ್ತು ಈ ಅಧಿನಿಯಮದ ಮೇರೆಗಿನ ಅರ್ಜಿಯ ಮೇಲಲ್ಲದೆ ಅನ್ಯಥಾ ಆ ವಿವಾಹವನ್ನು ಶೂನ್ಯಗೊಳಿಸಿರಲಿ ಅಥವಾ ಇಲ್ಲದಿರಲಿ, ಕಾನೂನು ಸಮ್ಮತವಾಗಿರತಕ್ಕುದು.

(2) ಶೂನ್ಯಕರಣೀಯ ವಿವಾಹದ ಸಂಬಂಧದಲ್ಲಿ 12ನೇ ಪ್ರಕರಣದ ಮೇರೆಗೆ ಅಕೃತತೆಯ ಡಿಕ್ರಿಯನ್ನು ನೀಡಿರುವಲ್ಲಿ, ಡಿಕ್ರಿಯ ದಿನಾಂಕದಂದು ಆ ವಿವಾಹವನ್ನು ಶೂನ್ಯಗೊಳಿಸುವ ಬದಲಾಗಿ ವಿಘಟಿತಗೊಳಿಸಿದ್ದರೆ, ಆ ವಿವಾಹದ ಪಕ್ಷಕಾರರ ಔರಸ ಮಗುವಾಗಬಹುದಾಗಿದ್ದ, ಡಿಕ್ರಿ ಮಾಡುವುದಕ್ಕೆ ಮೊದಲು ಜನಿಸಿದ್ದ ಅಥವಾ ಗರ್ಭದಲ್ಲಿದ್ದ ಯಾವುದೇ ಮಗುವನ್ನು ಶೂನ್ಯತೆಯ ಡಿಕ್ರಿಯಿದ್ದಾಗ್ಯೂ ಅವರ ಔರಸ ಮಗುವೆಂದೇ ಭಾವಿಸತಕ್ಕುದು.

(3) (1)ನೇ ಅಥವಾ (2)ನೇ ಉಪಪ್ರಕರಣದಲ್ಲಿ ಇರುವುದು ಯಾವುದೂ, ಈ ಅಧಿನಿಯಮದಿಂದ ಅನುಮೋದಿತವಾಗದೆ ಇದ್ದಿದ್ದರೆ ಅಕೃತ ಮತ್ತು ಶೂನ್ಯವಾಗಿರುವ ಅಥವಾ 12ನೇ ಪ್ರಕರಣದ ಮೇರೆಗೆ ಮಾಡಿದ ಅಕೃತತೆಯ ಡಿಕ್ರಿಯ ಮೂಲಕ ರದ್ದುಗೊಳಿಸಲಾದ ವಿವಾಹಜನಿತ ಯಾವುದೇ ಮಗುವಿಗೆ, ಅದು ತನ್ನ ತಂದೆ ತಾಯಿಗಳ ಔರಸ ಮಗುವಾಗಿರದ ಕಾರಣದಿಂದ ತನ್ನ ತಂದೆ ತಾಯಿಗಳಲ್ಲದ ಇತರ ಯಾವನೇ ವ್ಯಕ್ತಿಯ ಸ್ವತ್ತಿನಲ್ಲಿ ಅಥವಾ ಸ್ವತ್ತಿನ ಬಗ್ಗೆ ಯಾವುವೇ ಹಕ್ಕುಗಳನ್ನು ಹೊಂದಲು ಅಥವಾ ಆರ್ಜಿಸಲು ಅಸಮರ್ಥವಾಗಬಹುದಾಗಿದ್ದ ಯಾವುದೇ ಸಂದರ್ಭದಲ್ಲಿ, ಅಂಥ ಯಾವುವೇ ಹಕ್ಕುಗಳನ್ನು ಈ ಅಧಿನಿಯಮವು ಪ್ರದಾನ ಮಾಡುತ್ತದೆಂದು ಅರ್ಥಮಾಡತಕ್ಕುದಲ್ಲ.

17. ದ್ವಿವಿವಾಹಕ್ಕೆ ದಂಡನೆ.- ಈ ಅಧಿನಿಯಮದ ಪ್ರಾರಂಭದ ತರುವಾಯ ಇಬ್ಬರು ಹಿಂದೂಗಳ ನಡುವೆ ಅನುಷ್ಠಾಪಿತವಾದ ಯಾವುದೇ ವಿವಾಹವು ಅಂಥ ದಿನಾಂಕದಂದು ಅವರಲ್ಲೊಬ್ಬರಿಗೆ ಗಂಡ ಅಥವಾ ಹೆಂಡತಿಯು ಜೀವಿಸಿದ್ದರೆ ಶೂನ್ಯವಾಗಿರುತ್ತದೆ ಮತ್ತು ಭಾರತ ದಂಡ ಸಂಹಿತೆಯ 494ನೇ ಮತ್ತು 495ನೇ ಪ್ರಕರಣಗಳ ಉಪಬಂಧಗಳು ಆ ಪ್ರಕಾರ ಅನ್ವಯಿಸತಕ್ಕುದು.

18. ಹಿಂದೂ ವಿವಾಹದ ಕೆಲವು ಇತರ ಷರತ್ತುಗಳ ಉಲ್ಲಂಘನೆಗೆ ದಂಡನೆ.- 5ನೆಯ ಪ್ರಕರಣದ (iii), (iv), ಮತ್ತು (v)ನೇ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಉಲ್ಲಂಘಿಸಿ ಈ ಅಧಿನಿಯಮದ ಮೇರೆಗೆ ತನ್ನ ವಿವಾಹವನ್ನು ಅನುಷ್ಠಾಪಿಸಿಕೊಂಡಿರುವ ಪ್ರತಿಯೊಬ್ಬ ವ್ಯಕ್ತಿಯು-

(ಎ) 5ನೇ ಪ್ರಕರಣದ (iii)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿರುವ ಷರತ್ತನ್ನು ಉಲ್ಲಂಘಿಸಿದ ಸಂದರ್ಭದಲ್ಲಿ, ಹದಿನೈದು ದಿವಸಗಳವರೆಗಿನ ಸಾದಾ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಎರಡರಿಂದಲೂ;

(ಬಿ) 5ನೇ ಪ್ರಕರಣದ (iv) ಅಥವಾ (v)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿರುವ ಷರತ್ತುಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ, ಒಂದು ತಿಂಗಳವರೆಗಿನ ಸಾದಾ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಎರಡರಿಂದಲೂ;

(ಸಿ) [* * * *]

- ದಂಡನೀಯನಾಗತಕ್ಕುದು.

## ಅಧಿಕಾರವ್ಯಾಪ್ತಿ ಮತ್ತು ಪ್ರಕ್ರಿಯೆ

19. ಅರ್ಜಿಯನ್ನು ಯಾವ ನ್ಯಾಯಾಲಯಕ್ಕೆ ಸಲ್ಲಿಸುವುದು.- ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು,-

(i) ವಿವಾಹವು ಅನುಷ್ಠಾಪಿತವಾದ, ಅಥವಾ

(ii) ಅರ್ಜಿಯನ್ನು ಸಲ್ಲಿಸುವ ಕಾಲದಲ್ಲಿ ಪ್ರತಿ ಅರ್ಜಿದಾರನು ವಾಸಿಸುವ, ಅಥವಾ

(iii) ವಿವಾಹದ ಪಕ್ಷಕಾರರು ಕಡೆಯದಾಗಿ ಜೊತೆಯಾಗಿ ವಾಸಿಸಿದ, ಅಥವಾ

(iv) ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯಕ್ಷೇತ್ರಗಳ ಹೊರಗಡೆ, ಅರ್ಜಿಸಲ್ಲಿಸುವ ಕಾಲದಲ್ಲಿ, ಪ್ರತಿ ಅರ್ಜಿದಾರನು ವಾಸಿಸುವ ಸಂದರ್ಭದಲ್ಲಿ, ಅಥವಾ ಅವನು ಜೀವಂತವಾಗಿದ್ದಿದ್ದರೆ ಅವನ ಬಗ್ಗೆ ಸ್ವಾಭಾವಿಕವಾಗಿ ಕೇಳಿರುತ್ತಿದ್ದಂತಹ ವ್ಯಕ್ತಿಗಳು ಏಳು ಅಥವಾ ಹೆಚ್ಚು

ವರ್ಷಗಳವರೆಗೆ ಅವನು ಜೀವಂತನಾಗಿದ್ದಾನೆಂಬ ಬಗ್ಗೆ ಕೇಳಿರದ ಸಂದರ್ಭದಲ್ಲಿ, ಅರ್ಜಿದಾರನು ಆ ಕಾಲದಲ್ಲಿ ವಾಸಿಸುವ, ಸಾಮಾನ್ಯ ಸ್ಥಳೀಯ ಪರಿಮಿತಿಗಳ ಮೇಲೆ ಅಸಲು ಸಿವಿಲ್ ಅಧಿಕಾರ ವ್ಯಾಪ್ತಿಯುಳ್ಳ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸತಕ್ಕುದು.

20. ಅರ್ಜಿಗಳ ಒಳಾಂಶಗಳು ಮತ್ತು ಸತ್ಯಾಪನೆ.- (1) ಈ ಅಧಿನಿಯಮದ ಮೇರೆಗೆ ಸಲ್ಲಿಸಲಾದ ಪ್ರತಿಯೊಂದು ಅರ್ಜಿಯಲ್ಲಿ, ಮೊಕದ್ದಮೆಯ ಸ್ವರೂಪವು ಅವಕಾಶ ಕೊಡುವಷ್ಟು ಮಟ್ಟಿಗೆ ಸ್ಪಷ್ಟವಾಗಿ, ಪರಿಹಾರದ ಕ್ಲೇಮಿಗೆ ಆಧಾರವಾದ ಸಂಗತಿಗಳನ್ನು ನಮೂದಿಸತಕ್ಕುದು ಮತ್ತು 11ನೇ ಪ್ರಕರಣದ ಮೇರೆಗಿನ ಅರ್ಜಿಯ ಹೊರತಾಗಿ ಅರ್ಜಿದಾರನ ಹಾಗೂ ವಿವಾಹದ ಮತ್ತೊಬ್ಬ ಪಕ್ಷಕಾರನ/ಳ ನಡುವೆ ಯಾವ ಒಳಸಂಚೂ ಇಲ್ಲವೆಂಬುದನ್ನು ಕೂಡ ನಮೂದಿಸತಕ್ಕುದು.

(2) ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅರ್ಜಿಯಲ್ಲಿ ಅಡಕವಾಗಿರುವ ಹೇಳಿಕೆಗಳು ಅರ್ಜಿದಾರನಿಂದ ಅಥವಾ ಬೇರೊಬ್ಬ ಸಕ್ಷಮ ವ್ಯಕ್ತಿಯಿಂದ ವಾದಪತ್ರಗಳ ಸತ್ಯಾಪನೆಗೆ ಕಾನೂನು ಮೂಲಕ ಅಗತ್ಯಪಡಿಸಿದ ರೀತಿಯಲ್ಲಿ ಸತ್ಯಾಪನೆ ಮಾಡಲ್ಪಡತಕ್ಕುದು ಮತ್ತು ವಿಚಾರಣೆಯ ಕಾಲದಲ್ಲಿ ಸಾಕ್ಷ್ಯದಂತೆ ಅವುಗಳನ್ನು ಪರಾಮರ್ಶಿಸಬಹುದು.

21. 1908ರ 5ನೇ ಅಧಿನಿಯಮದ ಅನ್ವಯ.- ಈ ಅಧಿನಿಯಮದಲ್ಲಿರುವ ಇತರ ಉಪಬಂಧಗಳಿಗೆ ಮತ್ತು ಈ ಸಂಬಂಧದಲ್ಲಿ ಉಚ್ಚ ನ್ಯಾಯಾಲಯವು ರಚಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗಿನ ಎಲ್ಲ ವ್ಯವಹರಣೆಗಳು, ಸಾಧ್ಯವಿರುವಷ್ಟರ ಮಟ್ಟಿಗೆ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ ಪ್ರಕಾರ ವಿನಿಯಮಿತವಾಗತಕ್ಕುದು.

21ಎ. ಕೆಲವು ಸಂದರ್ಭಗಳಲ್ಲಿ ಅರ್ಜಿಗಳನ್ನು ವರ್ಗಾಯಿಸಲು ಅಧಿಕಾರ.- (1) (ಎ) 10ನೇ ಪ್ರಕರಣದ ಮೇರೆಗೆ ನ್ಯಾಯಿಕ ಪ್ರತ್ಯೇಕೀಕರಣದ ಡಿಕ್ರಿಯನ್ನು ಅಥವಾ 13ನೇ ಪ್ರಕರಣದ ಮೇರೆಗೆ ವಿವಾಹ ವಿಚ್ಛೇದನ ಡಿಕ್ರಿಯನ್ನು ಕೋರಿ ವಿವಾಹಿತ ವ್ಯಕ್ತಿಗಳಲ್ಲಿ ಒಬ್ಬರು ಈ ಅಧಿನಿಯಮದ ಮೇರೆಗೆ ಅಧಿಕಾರ ವ್ಯಾಪ್ತಿ ಹೊಂದಿರುವ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುವಲ್ಲಿ; ಮತ್ತು

(ಬಿ) ಅದೇ ಜಿಲ್ಲಾ ನ್ಯಾಯಾಲಯಕ್ಕೆ ಅಥವಾ ಬೇರೆ ಜಿಲ್ಲಾ ನ್ಯಾಯಾಲಯಕ್ಕೆ ಯಾವುದೇ ಕಾರಣದ ಮೇಲೆ, 10ನೇ ಪ್ರಕರಣದ ಮೇರೆಗೆ ನ್ಯಾಯಿಕ ಪ್ರತ್ಯೇಕೀಕರಣದ ಡಿಕ್ರಿಯನ್ನು ಅಥವಾ 13ನೇ ಪ್ರಕರಣದ ಮೇರೆಗೆ ವಿವಾಹ ವಿಚ್ಛೇದನದ ಡಿಕ್ರಿಯನ್ನು ಕೋರಿ ವಿವಾಹದ ಮತ್ತೊಬ್ಬ ಪಕ್ಷಕಾರರು ಈ ಅಧಿನಿಯಮದ ಮೇರೆಗೆ ಅನಂತರ ಇನ್ನೊಂದು ಅರ್ಜಿಯನ್ನು ಅದೇ ಜಿಲ್ಲಾ ನ್ಯಾಯಾಲಯದಲ್ಲಿ ಅಥವಾ ಅದೇ ರಾಜ್ಯದ ಅಥವಾ ಮತ್ತೊಂದು ರಾಜ್ಯದ ಬೇರೆ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಿರುವಲ್ಲಿ, ಆ ಅರ್ಜಿಗಳ ಬಗ್ಗೆ (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ವ್ಯವಹರಿಸತಕ್ಕುದು.

(2) (i)ನೇ ಉಪಪ್ರಕರಣವು ಅನ್ವಯಿಸುವ ಸಂದರ್ಭದಲ್ಲಿ,-

(ಎ) ಅರ್ಜಿಗಳನ್ನು ಒಂದೇ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸಿರುವಲ್ಲಿ, ಆ ಜಿಲ್ಲಾ ನ್ಯಾಯಾಲಯವು ಒಟ್ಟಿಗೆ ಎರಡೂ ಅರ್ಜಿಗಳನ್ನು ಪರಿಶೀಲಿಸಿ ವಿಚಾರಣೆ ಮಾಡತಕ್ಕುದು ಮತ್ತು ವಾದ ಪ್ರತಿವಾದಗಳನ್ನು ಕೇಳತಕ್ಕುದು;

(ಬಿ) ಅರ್ಜಿಗಳನ್ನು ಬೇರೆ ಬೇರೆ ಜಿಲ್ಲಾ ನ್ಯಾಯಾಲಯಗಳಿಗೆ ಸಲ್ಲಿಸಿರುವಲ್ಲಿ, ಅನಂತರ ಸಲ್ಲಿಸಿದ ಅರ್ಜಿಯನ್ನು ಮೊದಲನೇ ಅರ್ಜಿಯನ್ನು ಸಲ್ಲಿಸಿರುವ ಜಿಲ್ಲಾ ನ್ಯಾಯಾಲಯಕ್ಕೆ ವರ್ಗಾಯಿಸತಕ್ಕುದು ಮತ್ತು ಮೊದಲನೇ ಅರ್ಜಿಯನ್ನು ಸಲ್ಲಿಸಲಾದ ಜಿಲ್ಲಾ ನ್ಯಾಯಾಲಯವು ಆ ಎರಡೂ ಅರ್ಜಿಗಳನ್ನು ಒಟ್ಟಿಗೆ ವಿಚಾರಣೆ ಮಾಡಿ ವಿಲೇ ಮಾಡತಕ್ಕುದು.

(3) (2)ನೇ ಉಪಪ್ರಕರಣದ (ಬಿ) ಖಂಡವು ಅನ್ವಯಿಸುವ ಸಂದರ್ಭದಲ್ಲಿ ಎರಡನೇ ಅರ್ಜಿಯನ್ನು ಸಲ್ಲಿಸಿರುವ ಜಿಲ್ಲಾ ನ್ಯಾಯಾಲಯದಿಂದ ಯಾವುದೇ ದಾವೆ ಅಥವಾ ವ್ಯವಹರಣೆಯನ್ನು ಮೊದಲನೇ ಅರ್ಜಿಯು ಇತ್ಯರ್ಥವಾಗದೇ ಉಳಿದಿರುವ ಜಿಲ್ಲಾ ನ್ಯಾಯಾಲಯಕ್ಕೆ ವರ್ಗಾಯಿಸುವುದಕ್ಕೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಕ್ಷಮವಾಗಿರುವ, ಸಂದರ್ಭಾನುಸಾರ, ನ್ಯಾಯಾಲಯವು ಅಥವಾ ಸರ್ಕಾರವು, ಸದರಿ ಸಂಹಿತೆಯ ಮೇರೆಗೆ ಹಾಗೆ ಮಾಡಲು ಅದು ಶಕ್ತವಾಗಿದ್ದಿದ್ದರೆ ಹೇಗೋ ಹಾಗೆ, ಅಂಥ ಎರಡನೇ ಅರ್ಜಿಯನ್ನು ವರ್ಗಾಯಿಸಲು ತನ್ನ ಅಧಿಕಾರಗಳನ್ನು ಚಲಾಯಿಸತಕ್ಕುದು.

21ಬಿ.ಈ ಅಧಿನಿಯಮದ ಮೇರೆಗಿನ ಅರ್ಜಿಗಳ ವಿಚಾರಣೆ ಮತ್ತು ವಿಲೆಗೆ ಸಂಬಂಧಪಟ್ಟ ವಿಶೇಷ ಉಪಬಂಧ.- (1) ಈ ಅಧಿನಿಯಮದ ಮೇರೆಗಿನ ಅರ್ಜಿಯ ವಿಚಾರಣೆಯನ್ನು, ಆ ವಿಚಾರಣೆಯ ಸಂಬಂಧದಲ್ಲಿ ನ್ಯಾಯಪಾಲನೆಗೆ ಕಾರ್ಯ ಸಾಧ್ಯವಾದಷ್ಟು ಮಟ್ಟಿಗೆ, ಸುಸಂಗತವಾಗಿರುವಂತೆ ಅದು ಮುಕ್ತಾಯವಾಗುವವರೆಗೆ ಅಭಿಲೇಖಿಸಬೇಕಾದ ಕಾರಣಗಳಿಗಾಗಿ ಆ ವಿಚಾರಣೆಯನ್ನು ಮುಂದಿನ ದಿನಕ್ಕೂ ಮೀರಿ ಮುಂದೂಡುವುದು ಅವಶ್ಯವೆಂದು ನ್ಯಾಯಾಲಯಕ್ಕೆ ಕಂಡುಬಂದ ಹೊರತು, ದಿನದಿನವೂ ಮುಂದುವರಿಸತಕ್ಕುದು.

(2) ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅರ್ಜಿಯ ಬಗ್ಗೆ ಸಾಧ್ಯವಾದಷ್ಟು ಮಟ್ಟಿಗೆ ಶೀಘ್ರವಾಗಿ ವಿಚಾರಣೆ ಮಾಡತಕ್ಕುದು ಮತ್ತು ಪ್ರತಿ ಅರ್ಜಿದಾರನಿಗೆ ಅರ್ಜಿಯ ನೋಟೀಸು ಜಾರಿಯಾದ ದಿನಾಂಕದಿಂದ ಮೂರು ತಿಂಗಳುಗಳೊಳಗೆ ವಿಚಾರಣೆಯನ್ನು ಮುಕ್ತಾಯಗೊಳಿಸಲು ಪ್ರಯತ್ನ ಮಾಡತಕ್ಕುದು.

(3) ಈ ಅಧಿನಿಯಮದ ಮೇರೆಗೆ ಪ್ರತಿಯೊಂದು ಅಪೀಲನ್ನು ಸಾಧ್ಯವಾದಷ್ಟು ಮಟ್ಟಿಗೆ ಶೀಘ್ರವಾಗಿ ವಿಚಾರಿಸತಕ್ಕುದು ಮತ್ತು ಪ್ರತಿ ಅರ್ಜಿದಾರನಿಗೆ ಅಪೀಲಿನ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಮೂರು ತಿಂಗಳುಗಳೊಳಗೆ ವಿಚಾರಣೆಯನ್ನು ಮುಕ್ತಾಯಗೊಳಿಸಲು ಪ್ರಯತ್ನಮಾಡತಕ್ಕುದು.

21ಸಿ.ದಸ್ತಾವೇಜೀಯ ಸಾಕ್ಷ್ಯ.- ಯಾವುದೇ ಅಧಿನಿಯಮದಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅರ್ಜಿಯ ಅಧಿವಿಚಾರಣೆಗೆ ಸಂಬಂಧಿಸಿದ ಯಾವುದೇ ವ್ಯವಹರಣೆಯಲ್ಲಿ ಯಾವುದೇ ದಸ್ತಾವೇಜು, ಯಥೋಚಿತವಾಗಿ ಅದಕ್ಕೆ ಸ್ಟಾಂಪು ಹಾಕಿಲ್ಲವೆಂಬ ಅಥವಾ ಅದನ್ನು ನೋಂದಾಯಿಸಿಲ್ಲವೆಂಬ ಕಾರಣದಿಂದಾಗಿ ಸಾಕ್ಷ್ಯವಾಗಿ ಅಂಗೀಕಾರಾರ್ಹವಲ್ಲ ಎಂದಾಗತಕ್ಕುದಲ್ಲ.

22. ವ್ಯವಹರಣೆಗಳು ಗೋಪ್ಯವಾಗಿರತಕ್ಕುದು ಮತ್ತು ಅವುಗಳನ್ನು ಮುದ್ರಿಸತಕ್ಕುದಲ್ಲ ಅಥವಾ ಪ್ರಕಟಿಸತಕ್ಕುದಲ್ಲ.- (1) ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ವ್ಯವಹರಣೆಯನ್ನು ಗೋಪ್ಯವಾಗಿ ನಡೆಸತಕ್ಕುದು ಮತ್ತು ಉಚ್ಚ ನ್ಯಾಯಾಲಯದ ಅಥವಾ ಉಚ್ಚತಮ ನ್ಯಾಯಾಲಯದ ತೀರ್ಪನ್ನು ಆ ನ್ಯಾಯಾಲಯದ ಪೂರ್ವಾನುಮತಿಯನ್ನು ಪಡೆದು ಮುದ್ರಿಸುವುದು ಅಥವಾ ಪ್ರಕಟಿಸುವುದನ್ನುಳಿದು, ಅಂಥ ವ್ಯವಹರಣೆಗೆ ಸಂಬಂಧಿಸಿದ ಯಾವುದೇ ವಿಷಯವನ್ನು ಯಾವನೇ ವ್ಯಕ್ತಿಯು ಮುದ್ರಿಸುವುದು ಅಥವಾ ಪ್ರಕಟಿಸುವುದು ಕಾನೂನು ಬದ್ಧವಾಗಿರತಕ್ಕುದಲ್ಲ.

(2) ಯಾವನೇ ವ್ಯಕ್ತಿಯು (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ವಿಷಯವನ್ನು ಮುದ್ರಿಸಿದರೆ ಅಥವಾ ಪ್ರಕಟಿಸಿದರೆ, ಅವನು ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

23. ವ್ಯವಹರಣೆಗಳಲ್ಲಿ ಡಿಕ್ರಿ.- (1) ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ, ಅದು ಪ್ರತಿವಾದಿತರಾಗಿರಲಿ ಇಲ್ಲದಿರಲಿ,-

(ಎ) ಪರಿಹಾರ ಕೊಡಲು ಯಾವುವಾದರೂ ಕಾರಣಗಳು ಇವೆ ಮತ್ತು ಅಂಥ ಪರಿಹಾರದ ಉದ್ದೇಶಕ್ಕಾಗಿ ಅರ್ಜಿದಾರನು/ಳು (5ನೇ ಪ್ರಕರಣದ (ii)ನೇ ಖಂಡದ (ಎ), (ಬಿ) ಅಥವಾ (ಸಿ) ಉಪಖಂಡದಲ್ಲಿ ನಿರ್ದಿಷ್ಟಪಡಿಸಿದ ಆಧಾರದ ಮೇಲೆ) ಅವನು/ಳು ಪರಿಹಾರವನ್ನು ಕೇಳಿರುವ ಸಂದರ್ಭಗಳಲ್ಲಿ ಹೊರತು ತನ್ನ ತಪ್ಪಿನ ಅಥವಾ ಅಸಮರ್ಥತೆಯ ಪ್ರಯೋಜನವನ್ನು ಯಾವುದೇ ರೀತಿಯಲ್ಲಿ ಪಡೆಯುತ್ತಿಲ್ಲ; ಮತ್ತು

(ಬಿ) ಅರ್ಜಿಯಲ್ಲಿರುವ ಕಾರಣವು 13ನೇ ಪ್ರಕರಣದ (1)ನೆಯ ಉಪ ಪ್ರಕರಣದ (i)ನೇ ಖಂಡದಲ್ಲಿ ನಿರ್ದಿಷ್ಟ ಪಡಿಸಿರುವ ಕಾರಣವಾಗಿರುವಲ್ಲಿ, ಫಿರ್ಯಾದು ಮಾಡಿರುವ ಯಾವುದೇ ಕೃತ್ಯ ಅಥವಾ ಕೃತ್ಯಗಳಲ್ಲಿ ಯಾವುದೇ ರೀತಿಯಲ್ಲಿ ಅರ್ಜಿದಾರನು ಭಾಗಿಯಾಗಿಲ್ಲ ಅಥವಾ ಅದನ್ನು ಅಥವಾ ಅವುಗಳನ್ನು ಪರೋಕ್ಷವಾಗಿ ಸಮ್ಮತಿಸಿಲ್ಲ ಅಥವಾ ಅದನ್ನು ಕ್ಷಮಿಸಿಲ್ಲ, ಅಥವಾ ಅರ್ಜಿಗೆ ಕ್ರೌರ್ಯವು ಕಾರಣವಾಗಿದ್ದರೆ, ಅರ್ಜಿದಾರನು ಅಂಥ ಕ್ರೌರ್ಯವನ್ನು ಯಾವುದೇ ರೀತಿಯಲ್ಲಿ ಕ್ಷಮಿಸಿಲ್ಲ; ಮತ್ತು

(ಬಿಬಿ) ಪರಸ್ಪರ ಸಮ್ಮತಿಯ ಆಧಾರದ ಮೇಲೆ ವಿವಾಹ ವಿಚ್ಛೇದನವನ್ನು ಕೋರಿದಾಗ ಅಂಥ ಸಮ್ಮತಿಯನ್ನು ಬಲಾತ್ಕಾರದಿಂದ, ಮೋಸದಿಂದ ಅಥವಾ ಅನುಚಿತ ಪ್ರಭಾವದಿಂದ ಪಡೆದಿಲ್ಲ; ಮತ್ತು

(ಸಿ) ಪ್ರತಿ ಅರ್ಜಿದಾರನೊಂದಿಗೆ ಮೋಸದ ಒಳಸಂಚು ಮಾಡಿ 11ನೇ ಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯಾಗಿರದ ಅರ್ಜಿಯನ್ನು ಸಲ್ಲಿಸಿಲ್ಲ ಅಥವಾ ಮುಂದುವರಿಸಿಲ್ಲ; ಮತ್ತು

(ಡಿ) ವ್ಯವಹರಣೆ ಮಾಡುವಲ್ಲಿ ಅನಾವಶ್ಯಕ ಅಥವಾ ಅನುಚಿತ ವಿಳಂಬವಾಗಿಲ್ಲ; ಮತ್ತು

(ಇ) ಪರಿಹಾರವನ್ನು ನೀಡದಿರಲು ಯಾವುದೇ ಇತರ ಕಾನೂನು ಸಮ್ಮತ ಕಾರಣವೂ ಇಲ್ಲ

- ಎಂದು ನ್ಯಾಯಾಲಯಕ್ಕೆ ಮನದಟ್ಟಾದರೆ, ಆಗ ಮತ್ತು ಅಂಥ ಸಂದರ್ಭದಲ್ಲಿ ಮಾತ್ರ ಅನ್ಯಥಾ ಅಲ್ಲದೆ, ನ್ಯಾಯಾಲಯವು ಅಂಥ ಪರಿಹಾರವನ್ನು ತದನುಸಾರ ಡಿಕ್ರಿಯ ಮೂಲಕ ನೀಡತಕ್ಕುದು.

(2) ಈ ಅಧಿನಿಯಮದ ಮೇರೆಗೆ ಯಾವುದೇ ಪರಿಹಾರವನ್ನು ನೀಡಲು ಉದ್ಯುಕ್ತವಾಗುವುದಕ್ಕೆ ಮುಂಚೆ ಮೊಕದ್ದಮೆಯ ಸ್ವರೂಪ ಮತ್ತು ಪರಿಸ್ಥಿತಿಗಳಿಗೆ ಸಂಗತವಾಗಿ ಪಕ್ಷಕಾರರ ನಡುವೆ ಮರು ಹೊಂದಾಣಿಕೆಯನ್ನು ಏರ್ಪಡಿಸುವ ಸಾಧ್ಯತೆಯಿರುವ ಪ್ರತಿಯೊಂದು ಮೊಕದ್ದಮೆಯಲ್ಲೂ, ಎಲ್ಲ ಪ್ರಯತ್ನಗಳನ್ನು ಮಾಡುವುದೇ ಪ್ರಥಮತ: ನ್ಯಾಯಾಲಯದ ಕರ್ತವ್ಯವಾಗಿರತಕ್ಕುದು:

ಪರಂತು, ಈ ಉಪಪ್ರಕರಣದಲ್ಲಿರುವುದಾವುದೂ, 13ನೇ ಪ್ರಕರಣದ (1)ನೇ ಉಪಪ್ರಕರಣದ (i)ನೇ, (ii)ನೇ, (iii)ನೇ,(iv)ನೇ, (v)ನೇ, (vi)ನೇ ಅಥವಾ(vii)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಆಧಾರಗಳ ಮೇಲೆ ಪರಿಹಾರವನ್ನು ಕೋರಿರುವ ಯಾವುದೇ ವ್ಯವಹರಣೆಗೆ ಅನ್ವಯಿಸತಕ್ಕುದಲ್ಲ.

(3) ಅಂಥ ಮರುಹೊಂದಾಣಿಕೆಗಳನ್ನು ಏರ್ಪಡಿಸಲು ನ್ಯಾಯಾಲಯಕ್ಕೆ ಸಹಾಯಮಾಡುವ ಉದ್ದೇಶಕ್ಕಾಗಿ, ಪಕ್ಷಕಾರರು ಹಾಗೆ ಅಪೇಕ್ಷಿಸಿದರೆ ಅಥವಾ ಹಾಗೆ ಮಾಡುವುದು ನ್ಯಾಯ ಮತ್ತು ಯುಕ್ತವೆಂದು ನ್ಯಾಯಾಲಯವು ಆಲೋಚಿಸಿದರೆ ಅದು, ಹದಿನೈದು ದಿನಗಳಿಗೆ ಮೀರದ ಯುಕ್ತ ಅವಧಿಯವರೆಗೆ ವ್ಯವಹರಣೆಯನ್ನು ಮುಂದೂಡಬಹುದು ಮತ್ತು ಈ ಸಂಬಂಧದಲ್ಲಿ ಪಕ್ಷಕಾರರು ಹೆಸರಿಸಿದ ಯಾವನೇ ವ್ಯಕ್ತಿಗೆ ಅಥವಾ ಅವರು ಯಾವನೇ ವ್ಯಕ್ತಿಯನ್ನು ಹೆಸರಿಸಲು ತಪ್ಪಿದರೆ ನ್ಯಾಯಾಲಯವು ನಾಮ ನಿರ್ದೇಶನ ಮಾಡಿದ್ದ ಯಾವನೇ ವ್ಯಕ್ತಿಗೆ ಮರು ಹೊಂದಾಣಿಕೆಯನ್ನು ಮಾಡಬಹುದೇ ಮತ್ತು ಮಾಡಲಾಗಿದೆಯೇ ಎಂಬುದನ್ನು ನ್ಯಾಯಾಲಯಕ್ಕೆ ವರದಿ ಮಾಡಬೇಕೆಂಬ ನಿರ್ದೇಶನಗಳೊಡನೆ ಆ ವಿಷಯವನ್ನು ಒಪ್ಪಿಸಬಹುದು ಮತ್ತು ನ್ಯಾಯಾಲಯವು ವ್ಯವಹರಣೆಯನ್ನು ಇತ್ಯರ್ಥ ಮಾಡುವಲ್ಲಿ ಆ ವರದಿಯನ್ನು ಸೂಕ್ತವಾಗಿ ಗಮನಿಸತಕ್ಕುದು.

(4) ವಿವಾಹ ವಿಚ್ಛೇದನದ ಡಿಕ್ರಿಯ ಮೂಲಕ ವಿವಾಹವು ವಿಘಟಿತವಾದ ಪ್ರತಿಯೊಂದು ಸಂದರ್ಭದಲ್ಲಿ, ಡಿಕ್ರಿಯನ್ನು ಕೊಡುವ ನ್ಯಾಯಾಲಯವು ಅದರ ಒಂದು ಪ್ರತಿಯನ್ನು ಉಚಿತವಾಗಿ ಪ್ರತಿಯೊಬ್ಬ ಪಕ್ಷಕಾರರಿಗೂ ಕೊಡತಕ್ಕುದು.

23ಎ. ವಿವಾಹವಿಚ್ಛೇದನ ಮತ್ತು ಇತರ ವ್ಯವಹರಣೆಗಳಲ್ಲಿ ಪ್ರತಿ ಅರ್ಜಿದಾರನಿಗೆ/ಳಿಗೆ ಪರಿಹಾರ.- ವಿವಾಹ ವಿಚ್ಛೇದನ ಅಥವಾ ನ್ಯಾಯಿಕ ಪ್ರತ್ಯೇಕೀಕರಣ ಅಥವಾ ದಾಂಪತ್ಯಾಧಿಕಾರಗಳ ಪೂರ್ವಸ್ಥಿತಿ ಪ್ರಾಪ್ತಿಯ ಬಗೆಗಿನ ಯಾವುದೇ ವ್ಯವಹರಣೆಯಲ್ಲಿ, ಪ್ರತಿ ಅರ್ಜಿದಾರನು/ಳು ಅರ್ಜಿದಾರನ/ಳ ಪರದಾರಾಗಮನ, ಕ್ರೌರ್ಯ ಅಥವಾ ತ್ಯಜನದ ಕಾರಣದ ಮೇಲೆ ಕೇಳಲಾದ ಪರಿಹಾರವನ್ನು ವಿರೋಧಿಸುವುದು

ಮಾತ್ರವಲ್ಲದೆ, ಆ ಕಾರಣದ ಮೇಲೆ ಈ ಅಧಿನಿಯಮದ ಮೇರೆಗೆ ಯಾವುದೇ ಪರಿಹಾರಕ್ಕೆ ಪ್ರತಿ ಕ್ಲೇಮನ್ನು ಸಹ ಮಾಡಬಹುದು ಮತ್ತು ಅರ್ಜಿದಾರನ/ಳ ಪರದಾರಾಗಮನ, ಕ್ರೌರ್ಯ ಅಥವಾ ತ್ಯಜನವು ರುಜುವಾತಾದರೆ, ಆ ಕಾರಣದ ಮೇಲೆ ಅಂಥ ಪರಿಹಾರವನ್ನು ಬಯಸಿ ಅವನು ಅಥವಾ ಅವಳು ಅರ್ಜಿಯನ್ನು ಸಲ್ಲಿಸಿದ್ದರೆ ಅವನು ಅಥವಾ ಅವಳು ಈ ಅಧಿನಿಯಮದ ಮೇರೆಗೆ ಪಡೆಯಲು ಹಕ್ಕುಳ್ಳ ಯಾವುದೇ ಪರಿಹಾರವನ್ನು ನ್ಯಾಯಾಲಯವು ಪ್ರತಿ ಅರ್ಜಿದಾರನಿಗೆ/ಳಿಗೆ ಕೊಡಬಹುದು.

24. ವಾದಕಾಲದಲ್ಲಿ ನಿರ್ವಹಣಾ ವೆಚ್ಚ ಮತ್ತು ವ್ಯವಹರಣೆಗಳ ವೆಚ್ಚಗಳು.- ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ಸಂದರ್ಭಾನುಸಾರ, ಹೆಂಡತಿಯಾಗಲಿ, ಗಂಡನಾಗಲಿ ತನ್ನ ಪೋಷಣೆಗೆ ಮತ್ತು ವ್ಯವಹರಣೆಯ ಅವಶ್ಯಕ ವೆಚ್ಚಗಳಿಗೆ ಸಾಕಾಗುವಷ್ಟು ಸ್ವತಂತ್ರ ಆದಾಯವನ್ನು ಹೊಂದಿಲ್ಲವೆಂದು ನ್ಯಾಯಾಲಯಕ್ಕೆ ಕಂಡುಬಂದರೆ, ಅದು ಆ ಹೆಂಡತಿಯ ಅಥವಾ ಗಂಡನ ಅರ್ಜಿಯ ಮೇಲೆ, ವ್ಯವಹರಣೆಯ ವೆಚ್ಚಗಳನ್ನು ಕೊಡಲು ಮತ್ತು ವ್ಯವಹರಣೆ ನಡೆಯುತ್ತಿರುವಾಗ, ಅರ್ಜಿದಾರನ ಸ್ವಂತ ಆದಾಯ ಮತ್ತು ಪ್ರತಿ ಅರ್ಜಿದಾರನ ಆದಾಯವನ್ನು ಗಮನಿಸಿ ನ್ಯಾಯಾಲಯಕ್ಕೆ ಯುಕ್ತವೆನಿಸಬಹುದಾದಂಥ ಮೊತ್ತವನ್ನು ಪ್ರತಿ ತಿಂಗಳೂ ಪ್ರತ್ಯರ್ಜಿದಾರನು ಅರ್ಜಿದಾರನಿಗೆ ಕೊಡಬೇಕೆಂದು ಆದೇಶಿಸಬಹುದು.

25. ಶಾಶ್ವತ ನಿರ್ವಹಣಾ ವೆಚ್ಚ ಮತ್ತು ಜೀವನಾಂಶ.- (1) ಈ ಅಧಿನಿಯಮದ ಮೇರೆಗೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ಯಾವುದೇ ನ್ಯಾಯಾಲಯವು ಯಾವುದೇ ಡಿಕ್ರಿಯನ್ನು ಮಾಡುವ ಕಾಲದಲ್ಲಿ ಅಥವಾ ಆ ತರುವಾಯ ಯಾವುದೇ ಕಾಲದಲ್ಲಿ, ಸಂದರ್ಭಾನುಸಾರ, ಹೆಂಡತಿಯಾಗಲಿ, ಗಂಡನಾಗಲಿ ಆ ಉದ್ದೇಶಕ್ಕಾಗಿ ಮಾಡಿದ ಅರ್ಜಿಯ ಮೇಲೆ ಅವನ ಅಥವಾ ಅವಳ ಜೀವನಾಂಶ ಮತ್ತು ಪೋಷಣೆಗಾಗಿ, ಪ್ರತ್ಯರ್ಜಿದಾರನ/ಳ ಸ್ವಂತ ಆದಾಯ ಮತ್ತು ಇತರ ಸ್ವತ್ತು ಏನಾದರೂ ಇದ್ದರೆ ಅದನ್ನು ಮತ್ತು ಅರ್ಜಿದಾರನ/ಳ ಸ್ವಂತ ಆದಾಯ ಮತ್ತು ಇತರ ಸ್ವತ್ತನ್ನು ಮತ್ತು ಪಕ್ಷಕಾರರ ವರ್ತನೆಯನ್ನು ಮತ್ತು ಮೊಕದ್ದಮೆಯ ಇತರ ಪರಿಸ್ಥಿತಿಗಳನ್ನು ಗಮನಿಸಿ, ನ್ಯಾಯಾಲಯಕ್ಕೆ ನ್ಯಾಯಸಮ್ಮತವೆನಿಸಬಹುದಾದಂಥ ಒಟ್ಟು ಮೊತ್ತವನ್ನು ಅಥವಾ ಮಾಸಿಕ ಅಥವಾ ಅವಧಿಕ ಮೊತ್ತವನ್ನು, ಅರ್ಜಿದಾರನ/ಳ ಜೀವಿತ ಕಾಲಕ್ಕೆ ಮೀರದ ಅವಧಿಯವರೆಗೆ, ಪ್ರತ್ಯರ್ಜಿದಾರನು/ಳು ಅರ್ಜಿದಾರನಿಗೆ/ಳಿಗೆ ಸಂದಾಯ ಮಾಡಲು ಆದೇಶ ಮಾಡಬಹುದು ಮತ್ತು ಅವಶ್ಯಕವಾದರೆ, ಪ್ರತ್ಯರ್ಜಿದಾರನ/ಳ ಸ್ಥಿರಸ್ವತ್ತಿನ ಮೇಲೆ ಪ್ರಭಾರ ಹಾಕಿ ಅಂಥ ಸಂದಾಯವನ್ನು ಭದ್ರಗೊಳಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ನ್ಯಾಯಾಲಯವು ಆದೇಶ ಮಾಡಿದ ತರುವಾಯ, ಯಾವುದೇ ಸಮಯದಲ್ಲಿ ಪಕ್ಷಕಾರರಲ್ಲಿ ಯಾರೊಬ್ಬರ ಪರಿಸ್ಥಿತಿಗಳಲ್ಲಿ ಬದಲಾವಣೆಯಾಗಿದೆಯೆಂದು ಆ ನ್ಯಾಯಾಲಯಕ್ಕೆ ಮನದಟ್ಟಾದರೆ ಅದು, ಪಕ್ಷಕಾರರಲ್ಲಿ ಯಾರೊಬ್ಬರ ಕೋರಿಕೆಯ ಮೇಲೆ ಅಂಥ ಯಾವುದೇ ಆದೇಶವನ್ನು ತಾನು ನ್ಯಾಯಸಮ್ಮತವಾಗಿ ಭಾವಿಸಬಹುದಾದಂಥ ರೀತಿಯಲ್ಲಿ ಬದಲಾಯಿಸಬಹುದು, ಮಾರ್ಪಡಿಸಬಹುದು ಅಥವಾ ರದ್ದುಗೊಳಿಸಬಹುದು.

(3) ಈ ಪ್ರಕರಣದ ಮೇರೆಗೆ ಪಕ್ಷಕಾರನ/ಳ ಪರವಾಗಿ ಆದೇಶ ಮಾಡಲಾಗಿದ್ದು ಅವನು/ಳು ಪುನ: ವಿವಾಹವಾಗಿದ್ದರೆ ಅಥವಾ ಆ ಪಕ್ಷಕಾರಳು ಹೆಂಡತಿಯಾಗಿದ್ದು ಅವಳು ಸತ್‌ಶೀಲಳಾಗಿಲ್ಲದಿದ್ದರೆ ಅಥವಾ ಪಕ್ಷಕಾರನು ಗಂಡನಾಗಿದ್ದು ಅವನು ದಾಂಪತ್ಯದ ಹೊರಗಿನ ಯಾವಳೇ ಸ್ತ್ರೀಯೊಂದಿಗೆ ಲೈಂಗಿಕ ಸಂಭೋಗ ಹೊಂದಿದ್ದನೆಂದು ನ್ಯಾಯಾಲಯಕ್ಕೆ ಮನದಟ್ಟಾದರೆ, ಅದು ಇತರ ಪಕ್ಷದ ಕೋರಿಕೆಯ ಮೇರೆಗೆ, ನ್ಯಾಯಾಲಯವು ನ್ಯಾಯಸಮತ್ಮವೆಂದು ಭಾವಿಸಬಹುದಾದಂಥ ರೀತಿಯಲ್ಲಿ, ಅಂಥ ಯಾವುದೇ ಆದೇಶವನ್ನು ಬದಲಾಯಿಸಬಹುದು, ಮಾರ್ಪಡಿಸಬಹುದು ಅಥವಾ ರದ್ದು ಗೊಳಿಸಬಹುದು.

26. ಮಕ್ಕಳ ಅಭಿರಕ್ಷೆ.- ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ, ಅಪ್ರಾಪ್ತವಯಸ್ಕ ಮಕ್ಕಳ ಅಭಿರಕ್ಷೆ, ಪೋಷಣೆ ಮತ್ತು ಶಿಕ್ಷಣದ ಸಂಬಂಧದಲ್ಲಿ ಸಾಧ್ಯವಿದ್ದ ಕಡೆಯಲ್ಲಿ ಅವರ ಇಚ್ಛೆಗೆ ಸಂಗತವಾಗಿ ನ್ಯಾಯಾಲಯವು ಕಾಲಕಾಲಕ್ಕೆ ತಾನು ನ್ಯಾಯಸಮ್ಮತ ಮತ್ತು ಯೋಗ್ಯ ಎಂದು ಭಾವಿಸಬಹುದಾದಂಥ ಮಧ್ಯಕಾಲೀನ ಆದೇಶಗಳನ್ನು ಹೊರಡಿಸಬಹುದು ಮತ್ತು ಆ ಡಿಕ್ರಿಯಲ್ಲಿ ಅಂಥ ಉಪಬಂಧಗಳನ್ನು ಮಾಡಬಹುದು, ಮತ್ತು ಡಿಕ್ರಿಯಾದ ಬಳಿಕ ಅಂಥ ಮಕ್ಕಳ ಅಭಿರಕ್ಷೆ, ಪೋಷಣೆ ಮತ್ತು ಶಿಕ್ಷಣದ ಸಂಬಂಧವಾಗಿ ಅಂಥ ಡಿಕ್ರಿಯನ್ನು ಪಡೆದುಕೊಳ್ಳಲು ನಡೆಸಿದ ವ್ಯವಹರಣೆಗಳು ಇನ್ನೂ ಇತ್ಯರ್ಥವಾಗದಿದ್ದಾಗ ಅಂಥ ಡಿಕ್ರಿಯ ಮೂಲಕ ಅಥವಾ ಮಧ್ಯಕಾಲೀನ ಆದೇಶಗಳ ಮೂಲಕ ಮಾಡಬಹುದಾಗಿದ್ದಂಥ ಎಲ್ಲ ಆದೇಶಗಳನ್ನು ಮತ್ತು ಉಪಬಂಧಗಳನ್ನು ಆ ಉದ್ದೇಶಕ್ಕಾಗಿ ಮಾಡಿಕೊಂಡಿರುವ ಅರ್ಜಿಯ ಮೇಲೆ ಕಾಲಕಾಲಕ್ಕೆ ಮಾಡಬಹುದು, ಮತ್ತು ನ್ಯಾಯಾಲಯವು ಹಿಂದೆ ಮಾಡಿದಂಥ ಯಾವುವೇ ಆದೇಶಗಳನ್ನು ಮತ್ತು ಉಪಬಂಧಗಳನ್ನು ಕಾಲಕಾಲಕ್ಕೆ ರದ್ದುಗೊಳಿಸಬಹುದು, ನಿಲಂಬನಗೊಳಿಸಬಹುದು ಅಥವಾ ಬದಲಾಯಿಸಬಹುದು.

27. ಸ್ವತ್ತಿನ ವಿಲೇವಾರಿ.- ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ನ್ಯಾಯಾಲಯವು, ವಿವಾಹ ಕಾಲಕ್ಕೆ ಅಥವಾ ಆ ಸಮಯದಲ್ಲಿ ಉಡುಗೊರೆಯಾಗಿ ಬಂದಿದ್ದು, ಒಟ್ಟಾಗಿ ಗಂಡ ಹೆಂಡತಿ ಇಬ್ಬರಿಗೂ ಸೇರಿರಬಹುದಾದ ಯಾವುದೇ ಸ್ವತ್ತಿನ ಸಂಬಂಧದಲ್ಲಿ ತಾನು ನ್ಯಾಯಸಮ್ಮತವೆಂದು ಮತ್ತು ಉಚಿತವೆಂದು ಭಾವಿಸುವಂಥ ಉಪಬಂಧಗಳನ್ನು ಅದು, ಡಿಕ್ರಿಯಲ್ಲಿ ಮಾಡಬಹುದು.

28. ಡಿಕ್ರಿಗಳ ಮತ್ತು ಆದೇಶಗಳ ಮೇಲೆ ಅಪೀಲು.- (1) ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ನ್ಯಾಯಾಲಯವು ಮಾಡಿದ ಎಲ್ಲ ಡಿಕ್ರಿಗಳು (3)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಆ ನ್ಯಾಯಾಲಯವು ಅಸಲು ಸಿವಿಲ್ ಅಧಿಕಾರ ವ್ಯಾಪ್ತಿಯ ಚಲಾವಣೆಯಲ್ಲಿ ಮಾಡಿದ ಡಿಕ್ರಿಗಳಂತೆಯೇ ಅಪೀಲೀಯವಾಗಿರತಕ್ಕುದು ಮತ್ತು ನ್ಯಾಯಾಲಯವು ತನ್ನ ಅಸಲು ಸಿವಿಲ್ ಅಧಿಕಾರ ವ್ಯಾಪ್ತಿಯ ಚಲಾವಣೆಯಲ್ಲಿ ಮಾಡುವ ತೀರ್ಮಾನಗಳ ಬಗ್ಗೆ ಸಾಮಾನ್ಯವಾಗಿ ಅಪೀಲುಗಳಿಗೆ ಅವಕಾಶ ಇರುವಂಥ ನ್ಯಾಯಾಲಯದಲ್ಲಿ ಅಂಥ ಪ್ರತಿಯೊಂದು ಅಪೀಲಿಗೂ ಅವಕಾಶವಿರತಕ್ಕುದು.

(2) ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ 25ನೇ ಅಥವಾ 26ನೇ ಪ್ರಕರಣದ ಮೇರೆಗೆ ನ್ಯಾಯಾಲಯವು ಮಾಡಿದ ಆದೇಶಗಳ ಬಗ್ಗೆ (3)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಅವು ಮಧ್ಯಕಾಲೀನ ಆದೇಶಗಳಾಗಿರದಿದ್ದರೆ

ಅಪೀಲೀಯವಾಗಿರತಕ್ಕುದು, ಮತ್ತು ನ್ಯಾಯಾಲಯವು ತನ್ನ ಅಸಲು ಸಿವಿಲ್ ಅಧಿಕಾರ ವ್ಯಾಪ್ತಿಯ ಚಲಾವಣೆಯಲ್ಲಿ ಮಾಡುವ ತೀರ್ಮಾನಗಳ ಬಗ್ಗೆ ಸಾಮಾನ್ಯವಾಗಿ ಅಪೀಲುಗಳಿಗೆ ಅವಕಾಶವಿರುವಂಥ ನ್ಯಾಯಾಲಯದಲ್ಲಿ ಅಂಥ ಪ್ರತಿಯೊಂದು ಅಪೀಲಿಗೂ ಅವಕಾಶ ಇರತಕ್ಕುದು.

(3) ಕೇವಲ ಖರ್ಚುಗಳ ವಿಷಯದ ಬಗ್ಗೆ ಈ ಪ್ರಕರಣದ ಮೇರೆಗೆ ಯಾವ ಅಪೀಲಿಗೂ ಅವಕಾಶವಿರತಕ್ಕುದಲ್ಲ.

(4) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು ಡಿಕ್ರಿಯ ಅಥವಾ ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ಸಲ್ಲಿಸತಕ್ಕುದು.

28ಎ. ಡಿಕ್ರಿಗಳ ಮತ್ತು ಆದೇಶಗಳ ಜಾರಿ.- ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ನ್ಯಾಯಾಲಯವು ಮಾಡಿದ ಎಲ್ಲ ಡಿಕ್ರಿಗಳನ್ನು ಮತ್ತು ಆದೇಶಗಳನ್ನು, ನ್ಯಾಯಾಲಯವು ತನ್ನ ಅಸಲು ಸಿವಿಲ್ ಅಧಿಕಾರ ವ್ಯಾಪ್ತಿಯ ಚಲಾವಣೆಯಲ್ಲಿ, ತತ್ಕಾಲದಲ್ಲಿ ಮಾಡಿದ ಡಿಕ್ರಿಗಳನ್ನು ಮತ್ತು ಆದೇಶಗಳನ್ನು ಜಾರಿ ಮಾಡುವ ರೀತಿಯಲ್ಲಿ ಜಾರಿಮಾಡತಕ್ಕುದು.

## ಉಳಿಸುವಿಕೆಗಳು ಮತ್ತು ನಿರಸನಗಳು

29. ಉಳಿಸುವಿಕೆಗಳು.- (1) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಹಿಂದೂಗಳಲ್ಲಿ ಅನುಷ್ಠಾಪಿತವಾದ ವಿವಾಹವು, ಅದು ಅನ್ಯಥಾ ಸಿಂಧುವಾದುದಾಗಿದ್ದು ಆ ವಿವಾಹದ ಪಕ್ಷಕಾರರು ಒಂದೇ ಗೋತ್ರಕ್ಕೆ ಅಥವಾ ಪ್ರವರಕ್ಕೆ ಅಥವಾ ಬೇರೆ ಬೇರೆ ಧರ್ಮಗಳಿಗೆ, ಜಾತಿಗಳಿಗೆ ಅಥವಾ ಒಂದೇ ಜಾತಿಯ ಒಳಪಂಗಡಗಳಿಗೆ ಸೇರಿದವರಾಗಿರುವ ಕಾರಣ ಮಾತ್ರದಿಂದಲೇ ಅದು ಸಿಂಧುವಲ್ಲವೆಂದು ಅಥವಾ ಸಿಂಧುವಾಗಿರಲಿಲ್ಲವೆಂದು ಭಾವಿಸತಕ್ಕುದಲ್ಲ.

(2) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ ಅನುಷ್ಠಾಪಿತವಾದ ಹಿಂದೂ ವಿವಾಹದ ವಿಘಟನೆಯನ್ನು ಪಡೆದುಕೊಳ್ಳುವ ರೂಢಿಯಿಂದ ಮಾನ್ಯತೆ ಪಡೆದ ಅಥವಾ ಯಾವುದೇ ವಿಶೇಷ ಅಧಿನಿಯಮದಿಂದ ಪ್ರದತ್ತವಾದ ಯಾವುದೇ ಹಕ್ಕಿನ ಮೇಲೆ ಈ ಅಧಿನಿಯಮದಲ್ಲಿರುವುದು ಯಾವುದೂ ಬಾಧಕವನ್ನುಂಟು ಮಾಡುವುದೆಂದು ಭಾವಿಸತಕ್ಕುದಲ್ಲ.

(3) ಯಾವುದೇ ವಿವಾಹವನ್ನು ಅಕೃತ ಮತ್ತು ಶೂನ್ಯವೆಂದು ಘೋಷಿಸುವ ಅಥವಾ ರದ್ದುಗೊಳಿಸುವ ಅಥವಾ ವಿಘಟಿಸುವ ಸಲುವಾಗಿ ಅಥವಾ ನ್ಯಾಯಿಕ ಪ್ರತ್ಯೇಕೀಕರಣಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಈ ಅಧಿನಿಯಮದ ಪ್ರಾರಂಭದಲ್ಲಿ ಇತ್ಯರ್ಥವಾಗದಿರುವ ಯಾವುದೇ ವ್ಯವಹರಣೆಯ ಮೇಲೆ ಈ ಅಧಿನಿಯಮದಲ್ಲಿರುವುದು ಯಾವುದೂ ಬಾಧಕವನ್ನುಂಟುಮಾಡತಕ್ಕುದಲ್ಲ, ಮತ್ತು ಈ ಅಧಿನಿಯಮವು ಅನುಮೋದಿತವಾಗಿಲ್ಲವೆಂಬಂತೆಯೇ ಅಂಥ ವ್ಯವಹರಣೆಯು ಮುಂದುವರಿಯಬಹುದು ಮತ್ತು ನಿರ್ಧರಿಸಲ್ಪಡಬಹುದು.

(4) ವಿಶೇಷ ವಿವಾಹ ಅಧಿನಿಯಮ, 1954 (1954ರ 43)ರ ಮೇರೆಗೆ ಹಿಂದೂಗಳ ನಡುವೆ ಅನುಷ್ಠಾಪಿತವಾದ ವಿವಾಹಗಳಿಗೆ ಸಂಬಂಧಿಸಿದ ಅದರಲ್ಲಿರುವ ಉಪಬಂಧಗಳ ಮೇಲೆ ವಿವಾಹವು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅನುಷ್ಠಾಪಿತವಾಗಿರಲಿ ತರುವಾಯ ಆಗಿರಲಿ, ಈ ಅಧಿನಿಯಮದಲ್ಲಿರುವುದು ಯಾವುದೂ ಬಾಧಕವನ್ನುಂಟು ಮಾಡುವುದೆಂದು ಭಾವಿಸತಕ್ಕುದಲ್ಲ.

30. ನಿರಸನಗಳು.- ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ, 1960(1960ರ 58)ರ 2ನೆಯ ಪ್ರಕರಣದ ಮತ್ತು ಮೊದಲನೆಯ ಅನುಸೂಚಿಯ ಮೇರೆಗೆ ನಿರಸಿತವಾಗಿದೆ.

* * * *

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು-1. ಕಾ.ಸೂ. 690